# "ರಾಷ್ಟ್ರೀಯ ಹಸಿರು ಪಡೆ" (ರಾ ಹ ಪ)

2001ರಲ್ಲಿ ಆರಂಭಗೊಂಡ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವು ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ (MoEF&CC) ರಾಷ್ಟ್ರೀಯ ಶಾಲಾ ಕಾರ್ಯಕ್ರಮವಾಗಿದೆ. ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಪರಿಸರದ ರಕ್ಷಣೆ ಮತ್ತು ಸುಧಾರಣೆಗೆ ಕ್ರಿಯಾಧಾರಿತ ಕಾರ್ಯಕ್ರಮಗಳನ್ನು ಕೈಗೊಳ್ಳಲು ರಾಷ್ಟ್ರಾದ್ಯಂತ ಶಾಲೆಗಳಲ್ಲಿ ಪರಿಸರ ಕೂಟಗಳನ್ನು ಸ್ಥಾಪಿಸುವ ಮೂಲಕ "ರಾಷ್ಟ್ರೀಯ ಹಸಿರು ಸೈನ್ಯ" ವನ್ನು ಸ್ಥಾಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಪನಿನೀಸಂಸಂ)ಯು 2009ರ ಜನವರಿಯಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕರ್ನಾಟಕದ ರಾಷ್ಟ್ರೀಯ ಹಸಿರು ಪಡೆಯ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. 2020-21ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಲ್ಲಿ 16,850 ಪರಿಸರ ಕೂಟದ ಶಾಲೆಗಳು ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಅನುದಾನವನ್ನು ಪಡೆದಿವೆ. ಪರಿಸರ ಕೂಟಗಳ ವಿವರಗಳು ಕೆಳಕಂಡಂತಿವೆ: –

**ರಾ.ಹ.ಪ ಕಾರ್ಯಕ್ರಮದಡಿ ಪರಿಸರ ಕೂಟ ಶಾಲೆಗಳ ಸಂಖ್ಯೆ.**

| ಕ್ರ. ಸಂ | ಶಾಲೆಯ ವರ್ಗ | ರಚಿಸಲಾದ ಪರಿಸರ ಕೂಟಗಳ ಸಂಖ್ಯೆ |
|---|---|---|
| 1 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು | 8204 |
| 2 | ಸರ್ಕಾರಿ ಪ್ರೌಢ ಶಾಲೆಗಳು | 4737 |
| 3 | ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳು | 813 |
| 4 | ಅನುದಾನಿತ ಪ್ರೌಢ ಶಾಲೆಗಳು | 2832 |
| 5 | ಖಾಸಗಿ ಶಾಲೆಗಳು | 264 |
| **ಒಟ್ಟು** | | **16850** |

## 2020-21 ರ ಅವಧಿಯಲ್ಲಿ ರಾ.ಹ.ಪ ಕಾರ್ಯಕ್ರಮಗಳು

2020-21 ನೇ ಸಾಲಿನ ಹಣಕಾಸಿನ ವರ್ಷದಲ್ಲಿ, ಪರಿಸರ, ಶಿಕ್ಷಣ ಮತ್ತು ತರಬೇತಿ (ಇಇಎಟಿ) ಯೋಜನೆಯಡಿ ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಕರ್ನಾಟಕದಲ್ಲಿ ಪರಿಸರ ಶಿಕ್ಷಣ ಮತ್ತು ತರಬೇತಿ ಯೋಜನೆಯನ್ನು ಬೆಂಬಲಿಸಲು ಪರಿಸರ ಶಿಕ್ಷಣ ಇಇ ವಿಭಾಗ ಅನುಮೋದನೆ ಆದೇಶ ಸಂಖ್ಯೆ 3-140/2001-ಇಇ (ಸಂಪುಟ – 1) ದಿನಾಂಕ– 15 ಜೂನ್ 2020 ರಂದು ರೂ 9,44,35,000/- (ರೂ ಒಂಬತ್ತು ಕೋಟಿ ನಲವತ್ತ ನಾಲ್ಕು ಲಕ್ಷ ಮೂವತ್ತೈದು ಸಾವಿರ), ಅನುದಾನವನ್ನು ಪನಿನೀಸಂಸಂಗೆ ಅನುಮೋದಿಸಿತು. ರೂ 8,50,00,000 (ರೂ ಎಂಟು ಕೋಟಿ ಐವತ್ತು ಲಕ್ಷ) ಅನುದಾನವನ್ನು 17000 ಇಕೋ–ಕ್ಲಬ್ ಶಾಲೆಗಳಿಗೆ, ರೂ 8,50,000/- (ರೂ ಎಂಟು ಲಕ್ಷ ಐವತ್ತು ಸಾವಿರ) ಅನುದಾನವನ್ನು 34 ಶೈಕ್ಷಣಿಕ ಜಿಲ್ಲೆಗಳಿಗೆ ಹಾಗು ರೂ 85,85,000/- (ಎಂಬತ್ತೈದು ಲಕ್ಷದ ಎಂಬತ್ತೈದು ಸಾವಿರ) ಗಳನ್ನು 2020-21 ನೇ ಸಾಲಿನ ಆಡಳಿತಾತ್ಮಕ ಶುಲ್ಕಗಳಿಗಾಗಿ ಅನುಮೋದಿಸಿದೆ.

2020-21 ನೇ ಸಾಲಿನ ಹಣಕಾಸಿನ ವರ್ಷದಲ್ಲಿ, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಪನಿನೀಸಂಸಂಗೆ ರೂ 9,29,99,112/- (ರೂ ಒಂಬತ್ತು ಕೋಟಿ ಇಪ್ಪತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರದ ನೂರ ಹನ್ನೆರಡು) ಅನುದಾನವನ್ನು ಬಿಡುಗಡೆಗೊಳಿಸಿದೆ. 17000 ಇಕೋ–ಕ್ಲಬ್ ಶಾಲೆಗಳಿಗೆ ಪ್ರತಿ ಶಾಲೆಗೂ ರೂ 5000/- ದಂತೆ ರೂ 8,50,00,000 (ರೂ ಎಂಟು ಕೋಟಿ ಐವತ್ತು ಲಕ್ಷ) ಅನುದಾನ, ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸಲು ಪ್ರತೀ ಜಿಲ್ಲೆಗೆ 25,000/- ರೂ ನಂತೆ 34 ಶೈಕ್ಷಣಿಕೆ ಜಿಲ್ಲೆಗಳಿಗೆ ರೂ 8,50,000/- (ಎಂಟು ಲಕ್ಷ ಐವತ್ತು ಸಾವಿರ) ಅನುದಾನ ಹಾಗು 2019-20 ನೇ ಸಾಲಿನ

ಆಡಳಿತಾತ್ಮಕ ಶುಲ್ಕ ರೂ 71,49,112/-(ರೂ ಎಪ್ಪತ್ತೊಂದು ಲಕ್ಷದ ನಲವತ್ತೊಂಬತ್ತು ಸಾವಿರದ ನೂರ ಹನ್ನೆರಡು) ಗಳನ್ನು ಮರುಪಾವತಿಯಾಗಿ ಬಿಡುಗಡೆಗೊಳಿಸಿದೆ.

**ಕೋಷ್ಟಕ:– ಸಮಗ್ರ ಶಿಕ್ಷಣ ಕರ್ನಾಟಕದ 34 ಶೈಕ್ಷಣಿಕ ಜಿಲ್ಲೆಗಳ ಇಕೋ ಕ್ಲಬ್ ಶಾಲೆಗಳಿಗೆ ಜಿಲ್ಲಾವಾರು ಅನುದಾನ ಬಿಡುಗಡೆಯಾದ ವಿವರಗಳು**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಒಟ್ಟು ಇಕೋ–ಕ್ಲಬ್ ಶಾಲೆಗಳು | ಇಕೋ–ಕ್ಲಬ್ ಶಾಲೆಗಳಿಗೆ ಅನುದಾನ ಸಹಾಯ (ರೂ) | ಜಿಲ್ಲೆಗಳ ಸಮಗ್ರ ಶಿಕ್ಷಣ ಕರ್ನಾಟಕ್ಕೆ ಆರ್ಥಿಕ ನೆರುವು |
|---|---|---|---|---|
| 1 | ಬಾಗಲಕೋಟೆ | 500 | 25,00,000 | 25,000 |
| 2 | ಬೆಂಗಳೂರು ಉತ್ತರ | 499 | 24,95,000 | 25,000 |
| 3 | ಬೆಂಗಳೂರು ಗ್ರಾಮೀಣ | 500 | 25,00,000 | 25,000 |
| 4 | ಬೆಂಗಳೂರು ದಕ್ಷಿಣ | 500 | 25,00,000 | 25,000 |
| 5 | ಬೆಳಗಾವಿ | 500 | 25,00,000 | 25,000 |
| 6 | ಬಳ್ಳಾರಿ | 500 | 25,00,000 | 25,000 |
| 7 | ಬೀದರ್ | 500 | 25,00,000 | 25,000 |
| 8 | ಬಿಜಾಪುರ | 500 | 25,00,000 | 25,000 |
| 9 | ಚಿಕ್ಕಬಳ್ಳಾಪುರ | 500 | 25,00,000 | 25,000 |
| 10 | ಚಾಮರಾಜನಗರ | 500 | 25,00,000 | 25,000 |
| 11 | ಚಿಕ್ಕೋಡಿ | 500 | 25,00,000 | 25,000 |
| 12 | ಚಿಕ್ಕಮಗಳೂರು | 500 | 25,00,000 | 25,000 |
| 13 | ಚಿತ್ರದುರ್ಗ | 500 | 25,00,000 | 25,000 |
| 14 | ದಕ್ಷಿಣ ಕನ್ನಡ | 500 | 25,00,000 | 25,000 |
| 15 | ದಾವಣಗೆರೆ | 500 | 25,00,000 | 25,000 |
| 16 | ಧಾರವಾಡ | 500 | 25,00,000 | 25,000 |
| 17 | ಗದಗ | 500 | 25,00,000 | 25,000 |
| 18 | ಗುಲ್ಬರ್ಗ | 500 | 25,00,000 | 25,000 |
| 19 | ಹಾಸನ | 500 | 25,00,000 | 25,000 |
| 20 | ಹಾವೇರಿ | 500 | 25,00,000 | 25,000 |
| 21 | ಕೊಡಗು | 360 | 18,00,000 | 25,000 |
| 22 | ಕೋಲಾರ | 500 | 25,00,000 | 25,000 |
| 23 | ಕೊಪ್ಪಳ | 500 | 25,00,000 | 25,000 |
| 24 | ಮಧುಗಿರಿ | 500 | 25,00,000 | 25,000 |
| 25 | ಮಂಡ್ಯ | 500 | 25,00,000 | 25,000 |
| 26 | ಮೈಸೂರು | 499 | 24,95,000 | 25,000 |
| 27 | ರಾಯಚೂರು | 492 | 24,60,000 | 25,000 |
| 28 | ರಾಮನಗರ | 500 | 25,00,000 | 25,000 |
| 29 | ಶಿವಮೊಗ್ಗ | 500 | 25,00,000 | 25,000 |
| 30 | ಶಿರಸಿ | 500 | 25,00,000 | 25,000 |
| 31 | ತುಮಕೂರು | 500 | 25,00,000 | 25,000 |
| 32 | ಉಡುಪಿ | 500 | 25,00,000 | 25,000 |
| 33 | ಉತ್ತರಕನ್ನಡ | 500 | 25,00,000 | 25,000 |
| 34 | ಯಾದಗಿರಿ | 500 | 25,00,000 | 25,000 |
| | **ಒಟ್ಟು** | **16850** | **8,42,50,000** | **8,50,000** |

## 2020-21 ರ ಸಾಲಿನ ಕಾರ್ಯಕ್ರಮಗಳು/ಚಟುವಟಿಕೆಗಳು

| ಕ್ರ.ಸಂ | ಚಟುವಟಿಕೆಯ ವಿವರ | ಸಂಖ್ಯೆ |
|---|---|---|
| 1 | ಪರಿಸರ ದಿನಾಚರಣೆಗಳು | 5 |
| 2 | ಮುಖ್ಯ ದಿನಾಚರಣೆಗಳು | 2 |
| 3 | ಸ್ವಚ್ಛತಾ ಕ್ರಿಯಾ ಯೋಜನೆಯ ಚಟುವಟಿಕೆಗಳು | 20 |
| 4 | ಕರಾವಳಿ ಕಡಲತೀರಗಳಲ್ಲಿ ಸ್ವಚ್ಛತೆ ಹಾಗು ಜಾಗೃತಿ ಮೂಡಿಸುವ ಚಟುವಟಿಕೆಗಳು | 5 ಕಡಲತೀರಗಳು |
| 5 | ಜಾಗೃತಿ ಕಾರ್ಯಕ್ರಮಗಳು | 10 |
| 6 | ತರಬೇತಿ ಕಾರ್ಯಕ್ರಮಗಳು | 86 |
| 7 | ಸಭೆಗಳು | 18 |
| 8 | ಇತರೆ ಉಪಕ್ರಮಗಳು | 1 |
| 9 | ಸಾಧನೆಗಳು | 2 |
| 10 | ಇಕೋಕ್ಲಬ್ ಶಾಲೆಗಳಿಗೆ ರಾಷ್ಟ್ರೀಯ ಹಸಿರು ಪಡೆ ತಂಡದ ಭೇಟಿ | 1668 ಶಾಲೆಗಳು |

**ಕಾರ್ಯಕ್ರಮಗಳು/ಚಟುವಟಿಕೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ**

## 1. ಪರಿಸರ ದಿನಾಚರಣೆಗಳು

| ಕ್ರಮ ಸಂಖ್ಯೆ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ | ಭಾಗಾಳು | ಭಾಗಾಳುಗಳ ಸಂಖ್ಯೆ | ಸಾರಾಂಶ |
|---|---|---|---|---|---|---|
| 01 | ವಿಶ್ವ ಭೂಮಿ ದಿನ | 22/04/2020 | ಆನ್‌ಲೈನ್ | ವಿದ್ಯಾರ್ಥಿಗಳು | 100+ | ಶಾಲಾ ಮಕ್ಕಳಿಗೆ ಆನ್‌ಲೈನ್ ಚಿತ್ರಕಲೆ ಮತ್ತು ಕವನ ಸ್ಪರ್ಧೆಗಳನ್ನು ಆಯೋಜಿಸಲಾಯಿತು. |
| 02 | ವಿಶ್ವ ಪರಿಸರ ದಿನಾಚರಣೆ | 05/06/2020 | ಪನಿನೀಸಂಸಂ, ಜೆ ಪಿ ನಗರ, ಬೆಂಗಳೂರು | ಪನಿನೀಸಂಸಂ ಸಿಬ್ಬಂದಿ | 100+ | ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಪನಿನೀಸಂಸಂ ದೊರೆಸಾನಿಪಾಳ್ಯ ಅರಣ್ಯ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ವಿವಿಧ ಬಗೆಯ ಹಣ್ಣಿನ ಜಾತಿಯ ಗಿಡಗಳನ್ನು ನೆಡಲಾಯಿತು. |
| 03 | ವಿಶ್ವ ಓಝೋನ್ ದಿನ | 16/09/2020 | ಆನ್‌ಲೈನ್ | ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾರ್ವಜನಿಕರು | 250+ | ಶ್ರೀಮತಿ ಲಕ್ಷ್ಮೀ ಬಾಲಾಜಿ ಅವರ ಆನ್‌ಲೈನ್ ವೆಬಿನಾರ್‌ಅನ್ನು "ಜೀವನಕ್ಕೆ ಓಝೋನ್. 35 ವರ್ಷಗಳ ಕಾಲ ಓಝೋನ್ ಪದರ ಸಂರಕ್ಷಣೆ" ಎಂಬ ವಿಷಯದ ಬಗ್ಗೆ ಆಯೋಜಿಸಲಾಯಿತು. |
| 04 | ವಿಶ್ವ ಜೌಗು ಭೂಮಿ ದಿನ | 02/02/2021 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರೋಜಿಪುರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ | ಇಕೋ–ಕ್ಲಬ್ ಶಿಕ್ಷಕರು ಮತ್ತು ವಿದ್ಯಾರ್ಥಿಗಳು | 200+ | • ವಿಶ್ವ ಜೌಗು ಭೂಮಿ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಹಾಗು ಪ್ರಬಂಧ ಸ್ಪರ್ಧೆಗಳನ್ನು ನಡೆಸಲಾಯಿತು<br>• ವಿದ್ಯಾರ್ಥಿಗಳಿಗೆ ಟೀ–ಶರ್ಟ್, ಟೊಪ್ಪಿಗಳು ಹಾಗು ಉಪಹಾರಗಳನ್ನು ವಿತರಿಸಲಾಯಿತು.<br>• ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು. |
| 05 | ವಿಶ್ವ ಜಲ ದಿನಾಚರಣೆ | 22/03/2021 | ಪನಿನೀಸಂಸಂ, ಜೆ ಪಿ ನಗರ, ಬೆಂಗಳೂರು | ಪನಿನೀಸಂಸಂ ಸಿಬ್ಬಂದಿ ಹಸಿರು ಕೌಶಲ್ಯ ಅಭಿವೃದ್ದಿ ಕಾರ್ಯಕ್ರಮದ | 100+ | ವಿಶ್ವ ಜಲ ದಿನಾಚರಣೆಯ ಅಂಗವಾಗಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಡಾ.ಕೆ.ಎಚ್.ವಿನಯ ಕುಮಾರ್, ನಿರ್ದೇಶಕರು (ಸಂಶೋಧನೆ) ಮತ್ತು ಮಹೇಶ್ ಟಿ, ತಾಂತ್ರಿಕ ನಿರ್ದೇಶಕರು "ನೀರಿನ ಪ್ರಾಮುಖ್ಯತೆ" ಕುರಿತು ಉಪನ್ಯಾಸ ನೀಡಿದರು. |

| | | | | | | |
|---|---|---|---|---|---|---|
| | | | | ಶಿಬಿರಾರ್ಥಿಗಳು ಹಾಗು ಕಾಲೇಜಿನ ವಿದ್ಯಾರ್ಥಿಗಳು | | |

## 2. ಮುಖ್ಯ ದಿನಾಚರಣೆಗಳು

| | | | | | | |
|---|---|---|---|---|---|---|
| 01 | ಸಂವಿಧಾನ ದಿನ | 26–11–2020 | ಪನಿನೀಸಂಸಂ ಯೋಜನಾ ಕಚೇರಿ ಮಲ್ಲೇಶ್ವರಂ ಹಾಗೂ ಕರ್ನಾಟಕದ ಇಕೋ–ಕ್ಲಬ್ ಶಾಲೆಗಳು | ಪನಿನೀಸಂಸಂ ಸಿಬ್ಬಂದಿ ಇಕೋ–ಕ್ಲಬ್ ಶಿಕ್ಷಕರು ಹಾಗು ವಿದ್ಯಾರ್ಥಿಗಳು | 100+ | • ಪನಿನೀಸಂಸಂಯ ಸಿಬ್ಬಂದಿ ಸಂವಿಧಾನದ ಮುನ್ನುಡಿಯನ್ನು ಓದಿದರು.<br>• ಮಾನವ ಹಕ್ಕುಗಳು ಹಾಗು ಮೂಲಭೂತ ಹಕ್ಕುಗಳ ಕುರಿತಾಗಿ ಇಕೋ–ಕ್ಲಬ್ ಶಾಲೆಗಳಲ್ಲಿ ಚಿತ್ರಕಲಾ ಸ್ಪರ್ಧೆ ಹಾಗು ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು.<br>• ಕೋವಿಡ್–೧೯ ಕಾರಣದಿಂದಾಗಿ ವಿದ್ಯಾರ್ಥಿಗಳು ತಮ್ಮ ನಿವಾಸದಲ್ಲಿ ಸಂವಿಧಾನ ಮುನ್ನುಡಿಯನ್ನು ಓದಿದರು. |
| 02 | ವಿಶ್ವ ಮಹಿಳಾ ದಿನಾಚರಣೆ | 08.03.2021 | 1) ಮಹಿಳಾ ಸಂಘ ಪ್ರೌಢ ಶಾಲೆ ಮಲ್ಲೇಶ್ವರಂ ಬೆಂಗಳೂರು<br><br>2)ಮಹಾರಾಣಿ ಅಮ್ಮಣಿ ಕಾಲೇಜು ಮಲ್ಲೇಶ್ವರಂ, ಬೆಂಗಳೂರು | ಶಿಕ್ಷಕರು ಹಾಗು ಮಹಿಳಾ ಸಂಘ ಪ್ರೌಢ ಶಾಲೆಯ ವಿದ್ಯಾರ್ಥಿಗಳು<br><br>ಮಹಾರಾಣಿ ಅಮ್ಮಣಿ ಕಾಲೇಜಿನ ತಾಂತ್ರಿಕ ಹಾಗು ತಾಂತ್ರಿಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು | 100+ | • "ಮಹಿಳೆಯರು ಎದುರಿಸುತ್ತಿರುವ ಸವಾಲುಗಳು" ಎಂಬುದರ ಕುರಿತಾಗಿ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆಯನ್ನು ನಡೆಸಲಾಯಿತು ಮತ್ತು ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು<br>• ಟೀ–ಶರ್ಟ್ಸ್, ಟೋಪಿಗಳು ಹಾಗು ಪರಿಸರ ಸಂದೇಶವುಳ್ಳ ಲೇಬಲ್‌ಗಳನ್ನು ವಿದ್ಯಾರ್ಥಿಗಳಿಗೆ ಹಾಗು ಸಿಬ್ಬಂದಿಗಳಿಗೆ ವಿತರಿಸಲಾಯಿತು.<br>• ಪರಿಸರ ಸ್ನೇಹಿ ಕಸದ ಬುಟ್ಟಿಗಳನ್ನು ಮಲ್ಲೇಶ್ವರಂ ಮಹಿಳಾ ಸಂಘ ಪ್ರೌಢ ಶಾಲೆ ಹಾಗು ಮಹಾರಾಣಿ ಅಮ್ಮಣಿ ಕಾಲೇಜು ಮಲ್ಲೇಶ್ವರಂ ಇವರಿಗೆ ವಿತರಿಸಲಾಯಿತು. |

**3. ಸ್ವಚ್ಛತಾ ಕ್ರಿಯಾ ಯೋಜನೆ:ಯ ಚಟುವಟಿಕೆಗಳು**

| ಕ್ರಮ ಸಂಖ್ಯೆ | ಕಾರ್ಯಕ್ರಮದ ಹೆಸರು | ದಿನಾಂಕಗಳು | ಸ್ಥಳ | ಭಾಗಳುಗಳು | ಭಾಗಳುಗಳ ಸಂಖ್ಯೆ | ಸಾರಾಂಶ |
|---|---|---|---|---|---|---|
| 1 | ಕಸವು ಕಸದ ಬುಟ್ಟಿಗೆ | ಜೂನ್ 10 ರಿಂದ ಜೂನ್ 25 | ಮಲ್ಲೇಶ್ವರಂ, ಮೆಜೆಸ್ಟಿಕ್, ಕೆ ಆರ್ ಮಾರುಕಟ್ಟೆ, ಯಶ್ವಂತಪುರ ಮಾರುಕಟ್ಟೆ, ಲಾಲ್ ಬಾಗ್ ಜೈವಿಕ ಉದ್ಯಾನವನ ಬೆಂಗಳೂರು ನಗರ | ಸಾರ್ವಜನಿಕರು | 100+ | ಜನರಲ್ಲಿ ಘನತ್ಯಾಜ್ಯ ನಿರ್ವಹಣಾ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲು ರಾಷ್ಟ್ರೀಯ ಹಸಿರು ಪಡೆ ತಂಡ ಬೆಂಗಳೂರಿನ ವಿವಿಧ ಭಾಗಗಳಲ್ಲಿ ಪ್ರಚಾರ ನಡೆಸಿತು. ಘನತ್ಯಾಜ್ಯ ನಿರ್ವಹಣಾ ನಿಯಮಗಳು– ೨೦೧೬ ರ ಮಾಹಿತಿಯ ಕರಪತ್ರಗಳನ್ನು ಸರ್ಕಾರಿ ಕಛೇರಿಗಳು, ಆಟದ ಮೈದಾನಗಳು, ಬಸ್ ನಿಲ್ದಾಣಗಳು, ಆಟೋ ನಿಲ್ದಾಣಗಳು, ಬೀದಿ ಬದಿಯ ಅಂಗಡಿಗಳು ಮತ್ತು ಸಾರ್ವಜನಿಕರಿಗೆ ವಿತರಿಸಲಾಯಿತು. |
| 02 | ಮಾಸ್ಕ್ ಮತ್ತು ಸ್ಯಾನಿಟೈಜರ್ ವಿತರಣೆ | 13.07.2020 | ಮಲ್ಲೇಶ್ವರಂ | ಸಾರ್ವಜನಿಕರು | 100+ | ಕೋವಿಡ್– ೧೯ ರ ಮಹಾಮಾರಿಯ ಬಗ್ಗೆ ಅರಿವನ್ನು ಮೂಡಿಸುವ ಸಲುವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮಾಸ್ಕ್ ಮತ್ತು ಸ್ಯಾನಿಟೈಜರ್‌ಗಳನ್ನು ವಿತರಿಸಲಾಯಿತು. |
| 03 | ಸ್ವಚ್ಛತಾ ಸಂದೇಶಗಳ ಪ್ರದರ್ಶನ | 14.07.2020 | ರಾಷ್ಟ್ರೀಯ ಹಸಿರು ಪಡೆ ಜಾಲತಾಣ ಮತ್ತು ಇಕೋ–ಕ್ಲಬ್ ಶಾಲೆಗಳು | ಸಾರ್ವಜನಿಕರು | 1000+ | ಸ್ವಚ್ಛ ಭಾರತದ ಕುರಿತು ಸಂದೇಶಗಳನ್ನು ಪ್ರದರ್ಶಿಸಲಾಯಿತು. ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ ಹಾಗು ಸ್ವಚ್ಛ ಮೇವ ಜಯತೇ ಕುರಿತಾದ ಸಂದೇಶಗಳನ್ನು ರಾಷ್ಟ್ರೀಯ ಹಸಿರು ಪಡೆ ಜಾಲತಾಣದಲ್ಲಿ https://ngc.karnataka.gov.in/ ಪ್ರದರ್ಶಿಸಲಾಯಿತು. ಇಕೋ–ಕ್ಲಬ್ ಶಾಲೆಗಳಲ್ಲಿ ಸ್ವಚ್ಛತೆಯ ಸಂದೇಶಗಳನ್ನು ವಿವಿಧ ಚಟುವಟಿಕೆಗಳು ಹಾಗು ಕಾರ್ಯಕ್ರಮಗಳ ಮುಖಾಂತರ ಪ್ರದರ್ಶಿಸಲಾಯಿತು. |
| 04 | ಚಿಟ್ಟೆಗಳ ಜೀವವೈವಿಧ್ಯತೆ ಕುರಿತಾಗಿ ಆನ್‌ಲೈನ್ ಛಾಯಾಚಿತ್ರ ಸ್ಪರ್ಧೆ | 18.07.2020 ರಿಂದ 01.08.2020 | ಪಸಿನೀಸಂಸಂ | ಸಾರ್ವಜನಿಕರು | 80+ | ಪರಿಸರ ಮಾಹಿತಿ ಕೇಂದ್ರ ವಿಭಾಗದ ಸಹಯೋಗದೊಂದಿಗೆ ರಾಷ್ಟ್ರೀಯ ಹಸಿರು ಪಡೆ ವಿಭಾಗವು ಜೈವಿಕ ವೈವಿಧ್ಯತೆಯ ಬಗ್ಗೆ ಜಾಗೃತಿ ಮೂಡಿಸಲು ಪತಂಗಗಳ ಜೀವವೈವಿಧ್ಯತೆಯ ಕುರಿತು ಛಾಯಾಚಿತ್ರ ಸ್ಪರ್ಧೆಯನ್ನು ಆಯೋಜಿಸಿತು. |

| | | | | | | |
|---|---|---|---|---|---|---|
| 05 | ಹ್ಯಾಂಡ್ ವಾಶ್‌ಗಳ ವಿತರಣೆ | 23.07.2020 | ಮಲ್ಲೇಶ್ವರಂ, | ಸಾರ್ವಜನಿಕರು | 100+ | ಕೋವಿಡ್– 19 ರ ಮಹಾಮಾರಿಯ ಬಗ್ಗೆ ಅರಿವನ್ನು ಮೂಡಿಸುವ ಸಲುವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಹ್ಯಾಂಡ್ ವಾಶ್‌ಗಳನ್ನು ವಿತರಿಸಲಾಯಿತು. |
| 06 | ಮಕ್ಕಳಿಗಾಗಿ ಆನ್ ಲೈನ್ ಸ್ಪರ್ಧೆ | 05.08.2020 | ಪನಿನೀಸಂಸಂ | ಶಾಲಾ ವಿದ್ಯಾರ್ಥಿಗಳು | 276+ | ಸ್ವಚ್ಛ ಭಾರತ ವಿಷಯದ ಕುರಿತು ಪ್ರಾಥಮಿಕ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಘೋಷಣ ಬರೆಯುವ ಸ್ಪರ್ಧೆ ಹಾಗು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಕೋವಿಡ್–19 ವಿಷಯವಾಗಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಯಿತು. ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. |
| 07 | ಕಛೇರಿಯಲ್ಲಿ ಸ್ವಚ್ಛತಾ ಸಂದೇಶಗಳ ಪ್ರದರ್ಶನ | 08.08.2020 | ಪನಿನೀಸಂಸಂ ಜೆ ಪಿ ನಗರ ಹಾಗು ಯೋಜನಾ ಕಛೇರಿ ಮಲ್ಲೇಶ್ವರಂ | ಸಾರ್ವಜನಿಕರು | 10000+ | ಪ್ಲಾಸ್ಟಿಕ್‌ನ ಹಾನಿಕಾರಕ ಪರಿಣಾಮಗಳ ಅರಿವು ಮೂಡಿಸುವ ಸಲುವಾಗಿ ಪ್ಲಾಸ್ಟಿಕ್ ನಿಷೇಧ ಮತ್ತು ಪ್ಲಾಸ್ಟಿಕ್ ಪರ್ಯಾಯಗಳ ಕುರಿತಾದ ಸಂದೇಶಗಳನ್ನು ಕಛೇರಿಯ ಮುಂಭಾಗದಲ್ಲಿ ಪ್ರದರ್ಶಿಸಲಾಯಿತು. |
| 08 | ಸ್ವಚ್ಛತಾ ಮತ್ತು ಗಿಡ ನೆಡುವ ಕಾರ್ಯಕ್ರಮ | 03.11.2020 ರಿಂದ 10.11.2020 | ಪನಿನೀಸಂಸಂ ಯೋಜನಾ ಕಛೇರಿ, ಮಲ್ಲೇಶ್ವರಂ, ಬೆಂಗಳೂರು | ಪನಿನೀಸಂಸಂ ಸಿಬ್ಬಂದಿ ಹಾಗು ಸಾರ್ವಜನಿಕರು | 200+ | • ಪೋಷನ್ ಅಭಿಯಾನ ಕಾರ್ಯಕ್ರಮವನ್ನು ಉತ್ತೇಜಿಸಲು ಹಾಗು ಸಾರ್ವಜನಿಕರು ಮತ್ತು ಇಕೋ–ಕ್ಲಬ್ ಶಾಲಾ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಬೆಂಗಳೂರಿನ ಪನಿನೀಸಂಸಂ ಮಲ್ಲೇಶ್ವರಂ ಯೋಜನಾ ಕಛೇರಿಯಲ್ಲಿ ಸ್ವಚ್ಛತಾ ಹಾಗು ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು.<br>• 50 + ಔಷಧಿಯ ಸಸ್ಯಗಳು, 30+ ಅಲಂಕಾರಿಕ ಸಸ್ಯಗಳು ಮತ್ತು ತರಕಾರಿ ಸಸ್ಯಗಳನ್ನು ನೆಡಲಾಯಿತು. |
| 09 | ಹಸಿರು ದೀಪಾವಳಿ – ಸ್ವಸ್ಥ ದೀಪಾವಳಿ | 13.11.2020 | ಮಹಾರಾಣಿ ಅಮ್ಮಣಿ ಕಾಲೇಜು ಮಲ್ಲೇಶ್ವರಂ, ಬೆಂಗಳೂರು | ಮಹಾರಾಣಿ ಅಮ್ಮಣಿ ಕಾಲೇಜಿನ ತಾಂತ್ರಿಕ ಹಾಗು ತಾಂತ್ರಿಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು | 50+ | ಪರಿಸರ ಸಂರಕ್ಷಣೆಗಾಗಿ ಪಟಾಕಿ ಮುಕ್ತ ದೀಪಾವಳಿ ಬಗ್ಗೆ ಜಾಗೃತಿ ಮೂಡಿಸಲು ಮಲ್ಲೇಶ್ವರಂನ ಮಹಾರಾಣಿ ಅಮ್ಮಣಿ ಕಾಲೇಜಿನಲ್ಲಿ ಹಸಿರು ದೀಪಾವಳಿ –ಸ್ವಸ್ಥ ದೀಪಾವಳಿ ಅಭಿಯಾನವನ್ನು ಆಯೋಜಿಸಲಾಗಿತ್ತು. |

| | | | | | | |
|---|---|---|---|---|---|---|
| 10 | ಇ–ತ್ಯಾಜ್ಯ ನಿರ್ವಹಣೆ ನಿಯಮಗಳು 2016 ಕನ್ನಡ ಅವತರಿಣಿಕೆಯ ಕೈಪಿಡಿಯ ವಿತರಣೆ | 19–11–2020 | ಮಿಂಚಂಚೆ ಮುಖಾಂತರ | ಸರ್ಕಾರಿ ಅಧಿಕಾರಿಗಳು, ಸಾರ್ವಜನಿಕರು, ಶಿಕ್ಷಣ ಇಲಾಖೆ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ. | 500+ | ಇ–ತ್ಯಾಜ್ಯ ನಿರ್ವಹಣಾ ನಿಯಮಗಳು 2016 ಅನ್ನು ಕನ್ನಡ ಭಾಷೆಗೆ ಅನುವಾದಿಸಲಾಗಿದೆ ಮತ್ತು ಇ–ತ್ಯಾಜ್ಯದ ಬಗ್ಗೆ ಜಾಗೃತಿ ಮೂಡಿಸಲು ಅದರ ನಕಲನ್ನು ವಿವಿಧ ಇಲಾಖೆಗಳಿಗೆ ಕಳುಹಿಸಲಾಗಿದೆ. |
| 11 | ಇ–ತ್ಯಾಜ್ಯ ನಿರ್ವಹಣೆ ಬಗ್ಗೆ ನಿರ್ವಹಣೆ | 21–11–2020 | ಆನ್ ಲೈನ್ | ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯೋಪಾಧ್ಯಾಯರು,ಇಕೋ–ಕ್ಲಬ್‌ಉಸ್ತುವಾರಿ ಶಿಕ್ಷಕರು ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು | 130+ | ಸಂಪನ್ಮೂಲ ವ್ಯಕ್ತಿ ರೋಹಿಣಿ ಗೋಪಾಲ್, ಕಾರ್ಯಕ್ರಮ ವ್ಯವಸ್ಥಾಪಕರು, ಅಂತರಾಷ್ಟ್ರೀಯ ತ್ಯಾಜ್ಯ ನಿರ್ವಹಣಾ ಸಂಸ್ಥೆ ಇವರು ತ್ಯಾಜ್ಯ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು |
| 12 | ಬಯಲು ಮುಕ್ತ ಶೌಚಾಲಯದ ಬಗ್ಗೆ ಅರಿವು | 25.11.2020 | ಪೂಜೆನಹಳ್ಳಿ, ಸಾಚಹಳ್ಳಿ, ದೇವನಹಳ್ಳಿ ಗ್ರಾಮಾಂತರ ಪ್ರದೇಶ, ಬೆಂಗಳೂರು ಗ್ರಾಮಾಂತರ ಪ್ರದೇಶ ಹಾಗು ದೊಡ್ಡಬಳ್ಳಾಪುರ | ಸಾರ್ವಜನಿಕರು ಶಿಕ್ಷಕರು ಹಾಗು ವಿದ್ಯಾರ್ಥಿಗಳು | 500+ | ಬೆಂಗಳೂರಿನ ವಿವಿಧ ಭಾಗಗಳಲ್ಲಿ ಬಯಲು ಮುಕ್ತ ಶೌಚಾಲಯದ ಕುರಿತು ಅರಿವು ಮೂಡಿಸುವ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು. ಬಯಲು ಮುಕ್ತ ಶೌಚಾಲಯದ ಕುರಿತು ಸಂದೇಶದ ಕರಪತ್ರಗಳನ್ನು ಮುದ್ರಿಸಲಾಯಿತು. |
| 13 | ಘನ ತ್ಯಾಜ್ಯ ನಿರ್ವಹಣೆ ಕುರಿತು ವೆಬಿನಾರ್ | 25–11–2020 | ಆನ್‌ಲೈನ್ | ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯೋಪಾದ್ಯಾಯರು,ಇಕೋ– ಕ್ಲಬ್ | 250+ | ಬೆಂಗಳೂರಿನ ಶ್ರೀ ವಾಣಿ ಎಜುಕೇಷನ್ ಸೊಸೈಟಿಯ ಸಹಾಯಕ ಶಿಕ್ಷಕರಾದ ಶ್ರೀಮತಿ ಲಕ್ಷ್ಮೀ ಬಾಲಾಜಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಘನ ತ್ಯಾಜ್ಯ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. |

| | | | | | | |
|---|---|---|---|---|---|---|
| | | | | ಉಸ್ತುವಾರಿ ಶಿಕ್ಷಕರು ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು | | |
| 14 | ಪ್ಲಾಸ್ಟಿಕ್ ನಿಷೇದದ ಅರಿವಿನ ಕುರಿತು ವೆಬಿನಾರ್ | 24-12-2020 | ಆನ್‌ಲೈನ್ | ಇಕೋ-ಕ್ಲಬ್ ಉಸ್ತುವಾರಿ ಶಿಕ್ಷಕರು ಹಾಗು ವಿದ್ಯಾರ್ಥಿಗಳು | 250+ | ಸಂಪನ್ಮೂಲ ವ್ಯಕ್ತಿ ಶ್ರೀ ರಾಜಶೇಖರ ಪಾಟೀಲ್, ಸಂಯೋಜಕರು, ಕರ್ನಾಟಕ ವಿಜ್ಞಾನ ಪರಿಷತ್ ಬೆಳಗಾವಿ ಇವರು ಪ್ಲಾಸ್ಟಿಕ್ ನಿಷೇಧದ ಜಾಗೃತಿ ಕುರಿತು ಉಪನ್ಯಾಸ ನೀಡಿದರು. . |
| 15 | ಪ್ಲಾಸ್ಟಿಕ್ ನಿಷೇದದ ಅರಿವು | 26-12-2020 | ಮಲ್ಲೇಶ್ವರಂ ಹಾಗು ಸುತ್ತಮುತ್ತಲಿನ ಪ್ರದೇಶಗಳು | ಸಾರ್ವಜನಿಕರು | 500+ | • ಬೆಂಗಳೂರಿನ ವಿವಿಧ ಭಾಗಗಳಲ್ಲಿ ಪ್ಲಾಸ್ಟಿಕ್ ನಿಷೇಧ ಅರಿವಿನ ಶಿಬಿರವನ್ನು ರಾಷ್ಟ್ರೀಯ ಹಸಿರು ಪಡೆ ತಂಡವು ಆಯೋಜಿಸಿತು.<br>• ಏಕ ಬಳಕೆಯ ಪ್ಲಾಸ್ಟಿಕ್ ಹಾಗು ಪ್ಲಾಸ್ಟಿಕ್ ಪರ್ಯಾಯ ಸಂದೇಶಗಳನ್ನೊಳಗೊಂಡ ಕರಪತ್ರಗಳನ್ನು ಮುದ್ರಿಸಲಾಯಿತು ಹಾಗು ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಲಾಯಿತು. |
| 16 | ಕಸ ವಿರೋಧಿ ಹಾಗು ಕೋವಿಡ್ -19 ಕುರಿತು ಅರಿವಿನ ಕಾರ್ಯಕ್ರಮ | 07.01.2021 | ಸರ್ಕಾರಿ ಬಾಲಕರ ಪ್ರೌಢ ಶಾಲೆ ಮಲ್ಲೇಶ್ವರಂ | ಇಕೋ-ಕ್ಲಬ್ ಉಸ್ತುವಾರಿ ಶಿಕ್ಷಕರು ಹಾಗು ವಿದ್ಯಾರ್ಥಿಗಳು | 200+ | ವಿದ್ಯಾರ್ಥಿಗಳಿಗೆ ಪರಿಸರ ರಸಪ್ರಶ್ನೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ನಡೆಸಲಾಯಿತು., ವಿದ್ಯಾರ್ಥಿಗಳಿಗೆ ಲೇಬಲ್‌ಗಳು, ಚಿತ್ರಕಲಾ ಪುಸ್ತಕಗಳು, ಲೇಖನ ಸಾಮಗ್ರಿಗಳು ಹಾಗು ಉಪಹಾರಗಳನ್ನು ವಿತರಿಸಲಾಯಿತು. |
| 17 | ಸಾಮಾಜಿಕ ಜಾಲತಾಣಗಳ ಮುಖಾಂತರ ಚಟುವಟಿಕೆಗಳ ಉತ್ತೇಜನೆ | 01.04.2020 ರಿಂದ 31.03.2021 | ರಾಷ್ಟ್ರೀಯ ಹಸಿರು ಪಡೆ ಜಾಲತಾಣ, ಫೇಸ್ ಬುಕ್ ಹಾಗು ಟ್ವಿಟರ್. | ಸಾರ್ವಜನಿಕರು | 1000+ | ರಾಷ್ಟ್ರೀಯ ಹಸಿರು ಪಡೆ ಹಾಗು ಸ್ವಚ್ಛತಾ ಕ್ರಿಯಾ ಯೋಜನೆಯ ಚಟುವಟಿಕೆಗಳನ್ನು ಸಾಮಾಜಿಕ ಜಾಲಾತಾಣದಲ್ಲಿ ಪ್ರದರ್ಶಿಸಲಾಯಿತು.<br>ಫೇಸ್ ಬುಕ್ ಖಾತೆ https://www.facebook.com/NGCkarnataka/<br>ಟ್ವಿಟರ್ ಖಾತೆ https://twitter.com/NGCkarnataka201<br>ಜಾಲಾತಾಣ https://ngc.karnataka.gov.in/ |
| 18 | ವೈಟ್ ಬೋರ್ಡ್ ಅನಿಮೇಷನ್ | 2020-21 ಆರ್ಥಿಕ ವರ್ಷ | ಡಿಜಿಟಲ್ ಮಾಧ್ಯಮ | ಸಾರ್ವಜನಿಕರು, ಇಕೋ-ಕ್ಲಬ್ ಉಸ್ತುವಾರಿ ಶಿಕ್ಷಕರು ಹಾಗು ವಿದ್ಯಾರ್ಥಿಗಳು | - | ವಿವಿಧ ಪರಿಸರ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ವಾಯುಮಾಲಿನ್ಯ, ಪ್ಲಾಸ್ಟಿಕ್ ಮಾಲಿನ್ಯ, ಘನತ್ಯಾಜ್ಯ ನಿರ್ವಹಣೆ ಮತ್ತು ಜೀವವೈದ್ಯಕೀಯ ತ್ಯಾಜ್ಯ ನಿರ್ವಹಣೆ ಕುರಿತು ವೈಟ್ ಬೋರ್ಡ್ ಅನಿಮೇಷನ್‌ಗಳನ್ನು ಡಿಜಿಟಲ್ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಪ್ರಚುರ ಪಡಿಸಲು ಸಿದ್ದಪಡಿಸಲಾಯಿತು. |

| | | | | | | |
|---|---|---|---|---|---|---|
| 19 | "ಹಕ್ಕಿಗೊಂದು ಗೂಡುಕೊಡಿ" ಸಾಕ್ಷ್ಯಚಿತ್ರದ ವೀಡಿಯೋ | 2020–21 ಆರ್ಥಿಕ ವರ್ಷ | ಡಿಜಿಟಲ್ ಮಾಧ್ಯಮ | ಸಾರ್ವಜನಿಕರು, ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಹಾಗು ವಿದ್ಯಾರ್ಥಿಗಳು | - | ಕನ್ನಡ ಭಾಷೆಯ ಪ್ರಸಿದ್ದ ಕಾದಂಬರಿಕಾರ ಮತ್ತು ಬರಹಗಾರ ನಾ ಡಿಸೋಜಾ ಬರೆದ ಮಕ್ಕಳ ಪುಸ್ತಕವನ್ನು ಆಧರಿಸಿ "ಹಕ್ಕಿಗೊಂದು ಗೂಡುಕೊಡಿ" ಸಾಕ್ಷ್ಯಚಿತ್ರವನ್ನು ಡಿಜಿಟಲ್ ಮಾಧ್ಯಮಗಳ ಮೂಲಕ ಪ್ರಸಾರ ಮಾಡಲು ಸಿದ್ದಪಡಿಸಲಾಯಿತು. |
| 20 | "ಪಶ್ಚಿಮ ಘಟ್ಟಗಳು ಮತ್ತು ಹವಾಮಾನ ಬದಲಾವಣೆ" ಪುಸ್ತಕ | 2020–21 ಆರ್ಥಿಕ ವರ್ಷ | ಡಿಜಿಟಲ್ ಮಾಧ್ಯಮ | ಸಾರ್ವಜನಿಕರು, ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಹಾಗು ವಿದ್ಯಾರ್ಥಿಗಳು | - | ಕನ್ನಡ ಭಾಷೆಯ ಪ್ರಸಿದ್ದ ಕಾದಂಬರಿಕಾರ ಮತ್ತು ಬರಹಗಾರ ನಾ ಡಿಸೋಜಾ ಅವರು ಪಶ್ಚಿಮ ಘಟ್ಟಗಳು ಮತ್ತು ಹವಾಮಾನ ಬದಲಾವಣೆ ಎಂಬ ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕವು ಪಶ್ಚಿಮ ಘಟ್ಟಗಳ ಮೇಲೆ ಹವಾಮಾನ ಬದಾಲಾವಣೆಯ ಪ್ರಭಾವದ ಕುರಿತಾಗಿದೆ |

## 4. ಕರಾವಳಿ ಕಡಲತೀರಗಳಲ್ಲಿ ಸ್ವಚ್ಛತೆ ಹಾಗು ಜಾಗೃತಿ ಮೂಡಿಸುವ ಚಟುವಟಿಕೆಗಳು

| ಕ್ರಮ ಸಂಖ್ಯೆ | ಕಾರ್ಯಕ್ರಮದ ಹೆಸರು | ದಿನಾಂಕಗಳು | ಸ್ಥಳ | ಭಾಗಾಳು | ಭಾಗಾಳುಗಳ ಸಂಖ್ಯೆ | ಸಾರಾಂಶ |
|---|---|---|---|---|---|---|
| **01** | ಸ್ವಚ್ಛತಾ ಕ್ರಿಯಾ ಯೋಜನೆಯಡಿಯಲ್ಲಿ ಸ್ವಚ್ಛತೆ ಹಾಗು ಜಾಗೃತಿಗೊಳಿಸುವ ಸಲುವಾಗಿ 5 ಕರಾವಳಿ ಕಡಲತೀರಗಳ ದತ್ತು. | 10/11/2020 ರಿಂದ 31/03/2021 | ದಕ್ಷಿಣ ಕನ್ನಡದ ಬೇಂಗ್ರೆ ಕಡಲತೀರ, ಇಡ್ಯಾ ಕಡಲತೀರ, ಸುರತ್ಕಲ್ ಕಡಲತೀರ, . ಉಡುಪಿ ಜಿಲ್ಲೆಯ ಕೋಡಿ ಹಾಗು ಎಮ್‌ಕೋಡಿ ಕಡಲತೀರ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಕಡಲತೀರ | ಸಾರ್ವಜನಿಕರು, ಕಡಲತೀರ ಬೇಟಿ ಮಾಡುವವರು ಹಾಗು ಪ್ರವಾಸಿಗರು | 10000+ | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸಹಯೋಗದೊಂದಿಗೆ ಪನಿನೀಸಂಸಂಯು ಕರ್ನಾಟಕ ಕರಾವಳಿ ಪ್ರದೇಶದ ೩ ಜಿಲ್ಲೆಗಳಲ್ಲಿನ ೫ ಕಡಲತೀರಗಳನ್ನು ದತ್ತು ತೆಗೆದುಕೊಂಡು ಸ್ವಚ್ಛತಾ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಕಾರ್ಯಕ್ರಮವು ನವೆಂಬರ್ ೨೦೨೦ ರಂದು ಪ್ರಾರಂಭಗೊಂಡು ಮಾರ್ಚ್ ೨೦೨೧ ರವರೆಗು ಮುಂದುವರೆಸಲಾಯಿತು. ತುಲಾನಾತ್ಮಕವಾಗಿ ಈ ಉಪಕ್ರಮದ ಪರಿಣಾಮವಾಗಿ ಕೋಡಿ, ಎಂ ಕೋಡಿ ಕಡಲತೀರಗಳಲ್ಲಿ ಹೆಚ್ಚಿನ ಸಂಖ್ಯೆಯ ಆಲಿವ್ ರಿಡ್ಲಿ ಸಮುದ್ರ ಆಮೆಗಳು ಕಂಡುಬಂದಿವೆ. ಕಡಲತೀರಗಳಲ್ಲಿ ಆಮೆಗಳು ಗೂಡು ಕಟ್ಟುವುದು ಇದೇ ಮೊದಲಾಗಿದ್ದು, ಸ್ವಚ್ಛ ಕಡಲ ತೀರಕ್ಕೆ ಸಾಕ್ಷಿಯಾಗಿದೆ<br>ಆಮೆಗಳು ಭಾರತದಲ್ಲಿ ಅಳಿವಂಚಿನಲ್ಲಿರುವ ಪ್ರಭೇಧಗಳಾಗಿವೆ.<br><br>• ಪ್ರತಿ ಕಡಲತೀರದಲ್ಲೂ ಇಬ್ಬರು ಸ್ವಚ್ಛತಾ ಸಿಬ್ಬಂದಿಗಳನ್ನು ನೇಮಿಸಿದ್ದು, ಸಾರ್ವಜನಿಕರಿಗೆ ಸ್ವಚ್ಛತೆ ಕುರಿತು ಅರಿವು ಮೂಡಿಸಲಾಯಿತು.<br><br>• ಟೀ–ಶರ್ಟ್ಸ್ ಟೋಪಿಗಳು, ಗೋಣಿ ಚೀಲಗಳು, ಮಾಸ್ಕ್, ಗ್ಲೌಸ್ ಮತ್ತು ಇತರೆ ಸ್ವಚ್ಛತಾ ಪರಿಕರಗಳನ್ನು ಸ್ವಚ್ಛತಾ ಸಿಬ್ಬಂದಿಗಳಿಗೆ ವಿತರಿಸಲಾಯಿತು.<br><br>• ಸ್ವಯಂ ಸೇವಕರು, ಸರ್ಕಾರಿ ನೌಕರರು, ಖಾಸಗಿ ವಲಯದ ನೌಕರರು, ಸರ್ಕಾರೇತರ ಸಂಸ್ಥೆಗಳು ಮತ್ತು ಸಾರ್ವಜನಿಕರು ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. |

## 5. ಜಾಗೃತಿ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ | ಭಾಗಗಳು | ಭಾಗಾಳುಗಳ ಸಂಖ್ಯೆ | ಸಾರಾಂಶ |
|---|---|---|---|---|---|---|
| 01 | ಕಡಲತೀರದ ಸುರಕ್ಷತಾ ಕ್ರಮಗಳ ಕುರಿತು– ವೆಬ್ ಆಧಾರಿತ ಅರಿವು ಕಾರ್ಯಕ್ರಮ | 20.05.2020 | ಆನ್‌ಲೈನ್ | ಶಾಲಾ ಮಕ್ಕಳು, ಶಿಕ್ಷಕರು, ಪ್ರವಾಸಿಗರು, ಸ್ಥಳೀಯ ಸಮುದಾಯಗಳು, ಬೀಮ್ಸ್ ಸೇವಾ ಸಿಬ್ಬಂದಿ, ಸಿಕಾಮ್ ಸಿಬ್ಬಂದಿ, ಕಾಸರಕೋಡು ಬೀಚ್‌ನ ಬಿಎಂಸಿ ಸದಸ್ಯ, ಸರ್ಕಾರಿ ಮತ್ತು ಸರ್ಕಾರೇತರ ಇಲಾಖೆಗಳ ಸಿಬ್ಬಂದಿ, ಬೀಚ್ ವ್ಯವಸ್ಥಾಪಕರು, ಬೀಚ್ ಸಿಬ್ಬಂದಿ, ಬೀಚ್‌ನ ಲೈಫ್ ಗಾರ್ಡ್‌ಗಳು ಮತ್ತು ಸಾರ್ವಜನಿಕರು | 100 | • ವನ್ಯಜೀವಿ ಮತ್ತು ಸಮುದ್ರ ಪರಿಸರವನ್ನು ಕಾಪಾಡಲು ಅಗತ್ಯವಾದ ಸುರಕ್ಷತಾ ಕಾರ್ಯವಿಧಾನಗಳನ್ನು ಗುರುತಿಸುವ ಶಿಕ್ಷಣ ನೀಡಲು ಈ ಕಾರ್ಯಕ್ರಮವನ್ನು ನಡೆಸಲಾಯಿತು<br>• ಶ್ರೀ ಸಂಜಯ್ ಜಲಾ, ಸಲಹೆಗಾರರು ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಮತ್ತು ಕ್ಷೇತ್ರದ ಇತರ ತಜ್ಞರು ಬೀಚ್ ಸುರಕ್ಷತಾ ಕ್ರಮಗಳ ಬಗ್ಗೆ ಚರ್ಚಿಸಿದರು<br>• ತರಬೇತಿ ಪಡೆದ ಜೀವರಕ್ಷಕ ದಳದವರು ಕಡಲತೀರಗಳಲ್ಲಿ ಪಾರುಗಾಣಿಕಾ/ಕಾಪಾಡುವ ಮತ್ತು ಪ್ರಥಮ ಚಿಕಿತ್ಸಾ ಸೌಲಭ್ಯ ಸೇರಿದಂತೆ ಬೀಚ್ ಸುರಕ್ಷತಾ ಸಲಹೆಗಳನ್ನು ನೀಡಿದರು. ಸುರಕ್ಷತಾ ಧ್ವಜಗಳು, ಲೈಫ್ ಜಾಕೆಟ್‌ಗಳು ಮುಂತಾದ ವಿಭಿನ್ನ ಬೀಚ್ ಸುರಕ್ಷತಾ ಸಾಧನಗಳನ್ನು ಸಹ ಪ್ರದರ್ಶಿಸಿದರು. |
| 02 | ಪೋಷಣ ಅಭಿಯಾನ | 29.09.2020 – 29.03.2021 | ಶಾಲೆ ಮತ್ತು ಕಾಲೇಜು ಆವರಣ | ಶಾಲಾ ಮಕ್ಕಳು ಇಕೋಕ್ಲಬ್ ಶಿಕ್ಷಕರು ಮತ್ತು ಸಾರ್ವಜನಿಕರು | ------ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಪೋಷಣ ಅಭಿಯಾನ ಕಾರ್ಯಕ್ರಮವನ್ನು ಉತ್ತೇಜಿಸಲು, ಗಿಡಮೂಲಿಕೆ ಅಥವಾ ಪೋಷಕಾಂಶ ಉದ್ಯಾನ, ಔಷಧೀಯ ಸಸ್ಯಗಳಂತಹ ಪೌಷ್ಠಿಕ ಸಸ್ಯಗಳನ್ನು ಇಕೋ ಕ್ಲಬ್ ಶಾಲೆ ಮತ್ತು ಕಾಲೇಜು ಆವರಣದಲ್ಲಿ ನೆಡಲಾಯಿತು. ಪೋಷಣ ಅಭಿಯಾನವು ಬೆಳವಣಿಗೆಯ ಕುಂಠಿತ, ಜನನ ತೂಕದಲ್ಲಿ ವ್ಯತ್ಯಾಸ, ಅಪೌಷ್ಟಿಕತೆ, ರಕ್ತ ಹೀನತೆ ಇವುಗಳನೆಲ್ಲ ದೇಶಾದಾದ್ಯಂತ ಕಡಿಮೆಮಾಡುವ ಗುರಿಯನ್ನು ಹೊಂದಿದೆ.<br>ಉತ್ತರ ಕನ್ನಡ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಶಿರಸಿ, ಬೆಳಗಾವಿ, ಗುಲ್ಬರ್ಗಾ, ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಮೈಸೂರು, ರಾಮನಗರ ಜಿಲ್ಲೆಗಳಲ್ಲಿ ಪೋಷಣ ಅಭಿಯಾನ ಕಾರ್ಯಕ್ರಮಗಳನ್ನು ನಡೆಸಲಾಗಿದೆ |
| 03 | ಒಂದು ಭೂಮಿ– ಒಂದು ಮನೆ | 01.10.2020 | ಆನ್‌ಲೈನ್ | ಶಾಲಾ ಮಕ್ಕಳು ಇಕೋಕ್ಲಬ್ ಶಿಕ್ಷಕರು | 7000 ಶಾಲೆಗಳೊಂದಿಗೆ | • ಡಬ್ಲ್ಯು.ಡಬ್ಲ್ಯು.ಎಫ್‌ಇಂಡಿಯಾ ಸಹಯೋಗದೊಂದಿಗೆ, ಇಕೋ ಕ್ಲಬ್ |

| | | | | | | |
|---|---|---|---|---|---|---|
| | ಕಾರ್ಯಕ್ರಮ (ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್– ಇಂಡಿಯಾ, (ಡಬ್ಲ್ಯುಡಬ್ಲ್ಯುಎಫ್ ಇಂಡಿಯಾ) ) | | | ಮತ್ತು ಸಾರ್ವಜನಿಕರು | ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ | ಉಸ್ತುವಾರಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅಕ್ಟೋಬರ್ 2020 ರಿಂದ ಜನವರಿ 2021 ರವರೆಗೆ "ಒಂದು ಭೂಮಿ–ಒಂದು ಮನೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲಾಯಿತು, ಇದರಲ್ಲಿ ವರ್ಚುವಲ್ ವಾಕ್, ಪಕ್ಷಿ ವೀಕ್ಷಣೆ, ತಜ್ಞರ ಮಾತುಕತೆ, ಹಸಿರು ಮನೆಯನ್ನಾಗಿ ಮಾಡಲು ಪೋಷಕರೊಂದಿಗೆ ನೆಡೆಸುವ ಚಟುವಟಿಕೆಗಳು ಮತ್ತು ಇತರೆ ಪರಿಸರ ಸಂಬಂಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.<br>• ಕರ್ನಾಟಕದಲ್ಲಿ ಪನಿನೀಸಂಸಂ ಡಬ್ಲ್ಯುಡಬ್ಲ್ಯುಎಫ್‌ನ ಒಂದು ಭೂಮಿ–ಒಂದು ಮನೆ ಕಾರ್ಯಕ್ರಮಕ್ಕೆ ಕೊಡುಗೆ ನೀಡಿದ್ದಕ್ಕಾಗಿ ಬದಲಾವಣೆಯ ಅತ್ಯುತ್ತಮ ಕಥೆ ಎಂದು ಪುರಸ್ಕೃತಗೊಂಡಿರುತ್ತದೆ. |
| 04 | ಎಂಪ್ರಿ ಯೋಜನಾ ಕಚೇರಿಯಲ್ಲಿ ಮಾದರಿ ಉದ್ಯಾನ | 04.11.2020 | ಎಂಪ್ರಿ ಯೋಜನಾ ಕಚೇರಿ | ಎಂಪ್ರಿ ಸಿಬ್ಬಂದಿ | 6 | ಪೋಷಣ ಅಭಿಯಾನದ ಭಾಗವಾಗಿ, ಯೋಜನಾ ಕಚೇರಿ ಆವರಣದಲ್ಲಿ ಮಾದರಿ ಉದ್ಯಾನವನ್ನು ಬೆಳೆಸಲಾಯಿತು. ಹೂಬಿಡುವ, ತರಕಾರಿ ಸಸ್ಯಗಳು, ಔಷಧೀಯ ಸಸ್ಯಗಳು ಮತ್ತು ವಿವಿಧ ಮರದ ಪ್ರಭೇದಗಳನ್ನು ಹಾಗು 90ಕ್ಕೂ ಹೆಚ್ಚು ವಿವಿಧ ಸಸ್ಯಗಳನ್ನು ನೆಡಲಾಯಿತು. |
| 05 | ಏಕ್ ಭಾರತ್ ಶ್ರೇಷ್ಠ ಭಾರತ್ ಕಾರ್ಯಕ್ರಮ | 24.02.2021 | ಇಕೋಕ್ಲಬ್ ಶಾಲೆಗಳು ಮತ್ತು ಆನ್‌ಲೈನ್ ಕಾರ್ಯಕ್ರಮ | ಶಾಲಾ ಮಕ್ಕಳು ಮತ್ತು ಇಕೋಕ್ಲಬ್ ಶಿಕ್ಷಕರು ಮತ್ತು ಸಾರ್ವಜನಿಕರು | ------ | ಏಕ್ ಭಾರತ್ ಶ್ರೇಷ್ಠ ಭಾರತ್ ಕಾರ್ಯಕ್ರಮವು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ಜೋಡಣೆಯ ಪರಿಕಲ್ಪನೆಯ ಮೂಲಕ ಪರಸ್ಪರ ಕ್ರಿಯೆಯನ್ನು ಹೆಚ್ಚಿಸಲು ಮತ್ತು ವಿವಿಧ ರಾಜ್ಯಗಳ / ಕೇಂದ್ರಾಡಳಿತ ಪ್ರದೇಶಗಳ ಜನರ ನಡುವೆ ಪರಸ್ಪರ ತಿಳುವಳಿಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಭಾಷಾ ಕಲಿಕೆ, ಸಂಸ್ಕೃತಿ, ಸಂಪ್ರದಾಯಗಳು ಮತ್ತು ಸಂಗೀತ, ಪ್ರವಾಸೋದ್ಯಮ ಮತ್ತು ಪಾಕಪದ್ಧತಿ, ಕ್ರೀಡೆ ಮತ್ತು ಉತ್ತಮ ಅಭ್ಯಾಸಗಳ ಹಂಚಿಕೆ ಮುಂತಾದ ಕ್ಷೇತ್ರಗಳಲ್ಲಿ ನಿರಂತರ ಮತ್ತು ರಚನಾತ್ಮಕ ಸಾಂಸ್ಕೃತಿಕ ಸಂಪರ್ಕವನ್ನು ಉತ್ತೇಜಿಸಲು ರಾಜ್ಯಗಳು ಚಟುವಟಿಕೆಗಳನ್ನು ನಿರ್ವಹಿಸುತ್ತವೆ. ಕರ್ನಾಟಕ ರಾಜ್ಯವು ಉತ್ತರಾಖಂಡದೊಂದಿಗೆ ಜೋಡಿಯಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ, ಜೋಡಿಯಾಗಿರುವ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ ರಾಜ್ಯ ನೋಡಲ್ ಸಂಸ್ಥೆಗಳು/ ಪರಿಸರ ಕ್ಲಬ್‌ಗಳು ತಮ್ಮ ಜ್ಞಾನ, ಉತ್ಪನ್ನಗಳು, ಪ್ರಕೃತಿ ಶಿಬಿರದ ಅನುಭವಗಳು, ನವೀನ ಚಟುವಟಿಕೆಗಳು, ಪ್ರಾರಂಭಿಸಿದ / ಯಶಸ್ಸಿನ ಕಥೆಗಳು ಇತ್ಯಾದಿಗಳನ್ನು ವಿನಿಮಯ ಮಾಡಿಕೊಳ್ಳುತ್ತವೆ. |
| 06 | ಭಾರತ್ ಕಾ | 04.03.2021 | ಇಕೋಕ್ಲಬ್ | ಶಾಲಾ ಮಕ್ಕಳು, | ಇಕೋಕ್ಲಬ್ | ಭಾರತವು 2022 ರ ಆಗಸ್ಟ್ 15 ರಂದು 75 ನೇ ಸ್ವಾತಂತ್ರೋತ್ಸವವನ್ನು |

| | | | | | | |
|---|---|---|---|---|---|---|
| | ಅಮೃತ್ ಮಹೋತ್ಸವ – 75 ಹಸಿರು ಒಳ್ಳೆಯ ಕಾರ್ಯಗಳು | | ಶಾಲೆಗಳು ಮತ್ತು ಆನ್‌ಲೈನ್ ಕಾರ್ಯಕ್ರಮ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ಸಾರ್ವಜನಿಕರು | ಶಾಲೆಗಳು | ಆಚರಿಸಲಿದ್ದು, 75 ವಾರಗಳ ಭಾರತ್ ಕಾ ಅಮೃತ್ ಮಹೋತ್ಸವವನ್ನು ಆಯೋಜಿಸುವ ಮೂಲಕ ಈ ಸಂದರ್ಭವನ್ನು ಭಾರತ ಸರ್ಕಾರವು ಸ್ಮರಿಸಿಕೊಳ್ಳುತ್ತಿದೆ. ಈ ಸನ್ನಿವೇಶದಲ್ಲಿ ಮಾರ್ಚ್ 2021ರ ಮೊದಲ ವಾರದಿಂದ 75 ವಾರಗಳ ಸುದೀರ್ಘ ಕಾರ್ಯಕ್ರಮವನ್ನು ನಡೆಸಲು ಇಕೋಕ್ಲಬ್‌ಗಳಿಗೆ ಸೂಚಿಸಲಾಗಿದೆ. ಪ್ರತಿ ವಾರವು ಒಂದು ಹಸಿರು ಒಳ್ಳೆಯ ಕಾರ್ಯವನ್ನು "ವಾರದ ಹಸಿರು ಕಾರ್ಯ" ಎಂದು ಪರಿಗಣಿಸಿ ಚಟುವಟಿಕೆಗಳನ್ನು ಆಯೊಜಿಸ ಬೇಕಾಗುವುದು. ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ 75 ಹಸಿರು ಒಳ್ಳೆಯ ಕಾರ್ಯವನ್ನು ಇಕೋಕ್ಲಬ್ ಶಾಲೆಗಗಳಿಗೆ ಪ್ರಚಾರ ಮಾಡಲು ಕನ್ನಡ ಭಾಷೆಗೆ ಅನುವಾದಿಸಲಾಗಿದೆ. |
| 07 | ಭಾರತ್ ಕಾ ಅಮೃತ್ ಮಹೋತ್ಸವ – ಜೌಗು ಭೂಮಿ ವಿಭಾಗ | 11.03.2021 | ಇಕೋಕ್ಲಬ್ ಶಾಲೆಗಳು ಮತ್ತು ಜೌಗು ಭೂಮಿ ಪ್ರದೇಶಗಳು. | ಶಾಲಾ ಮಕ್ಕಳು, ಇಕೋಕ್ಲಬ್ ಶಿಕ್ಷಕರು ಮತ್ತು ಸಾರ್ವಜನಿಕರು | ಇಕೋಕ್ಲಬ್ ಶಾಲೆಗಳು | 75 ವಾರಗಳ ಅವಧಿಯಲ್ಲಿ ವಿವಿಧ ಜೌಗು ಭೂಮಿ ತಾಣಗಳಲ್ಲಿ ಮತ್ತು ಇಕೋಕ್ಲಬ್ ಶಾಲೆಗಳಲ್ಲಿ ಸಾಪ್ತಾಹಿಕ ಚಟುವಟಿಕೆಗಳನ್ನು ಆಯೋಜಿಸಬೇಕಾಗುವುದು |
| 08 | ಪೆಟ್ರೋಲಿಯಂ ಸಂರಕ್ಷಣಾ ಸಂಶೋಧನಾ ಸಂಸ್ಥೆಯ (ಪಿ.ಸಿ ಆರ್.ಎ) ಯಿಂದ ಇಂಧನ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣಾ ಶಿಕ್ಷಣ ಕಾರ್ಯಕ್ರಮ. | 01.04.2021–31.03.2022 | ಇಕೋಕ್ಲಬ್ ಶಾಲೆಗಳು ಮತ್ತು ಆನ್‌ಲೈನ್ ಕಾರ್ಯಕ್ರಮ | ಶಾಲಾ ಮಕ್ಕಳು ಮತ್ತು ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 200 ಶಾಲೆಗಳು | ಇಂಧನ ಸಂರಕ್ಷಣೆ ಕುರಿತು 9 ರಿಂದ 12 ನೇ ತರಗತಿ ವಿದ್ಯಾರ್ಥಿಗಳಿಗೆ ಇಕೋಕ್ಲಬ್ ಶಾಲೆಗಳ ಮೂಲಕ ಇಂಧನ ಸಂರಕ್ಷಣೆ ಕುರಿತು ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲು ಪೆಟ್ರೋಲಿಯಂ ಸಂರಕ್ಷಣಾ ಸಂಶೋಧನಾ ಸಂಸ್ಥೆಯು ಉದ್ದೇಶಿಸಿದೆ. ವಿಜ್ಞಾನ ವಿಭಾಗದ ಗೊತ್ತುಪಡಿಸಿದ ಶಿಕ್ಷಕರ ಮೂಲಕ ಶಾಲೆಗಳಲ್ಲಿ ಕಾರ್ಯಕ್ರಮವನ್ನು ನಡೆಲಾಗುವುದು ಮತ್ತು ದೇಶಾದ್ಯಂತ ರಾಜ್ಯ ನೋಡಲ್ ಸಂಸ್ಥೆಗಳ ಮೂಲಕ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುವುದು. ಪನಿನೀಸಂಸಂ ಅನ್ನು ಕರ್ನಾಟಕ ರಾಜ್ಯದ ರಾಜ್ಯ ನೋಡಲ್ ಸಂಸ್ಥೆಯಾಗಿ ನಿಯೋಜಿಸಲಾಗಿದೆ. ಈ ಕಾರ್ಯಕ್ರಮದ ಮುಖ್ಯ ಪ್ರಯೋಜನವೆಂದರೆ ಅದು ರಚನಾತ್ಮಕ ಕಾರ್ಯಕ್ರಮವಾಗಿದ್ದು, ಇದು ಸ್ವಯಂ–ಸುಸ್ಥಿರ ಮಾದರಿಯನ್ನು ಆಧರಿಸಿದೆ, ಪ್ರತಿವರ್ಷ ಹೊಸ ವಿದ್ಯಾರ್ಥಿಗಳು ಶಿಕ್ಷಣ ಕಾರ್ಯಕ್ರಮಗಳಲ್ಲಿ ಒಳಗೊಂಡಿರುತ್ತಾರೆ. |
| 09 | ರಾ.ಹ.ಪ ಸಾಕ್ಷ್ಯಚಿತ್ರ ತಯಾರಿಕೆ | 2020–21ರ ಹಣಕಾಸು ವರ್ಷದಲ್ಲಿ | ಇಕೋಕ್ಲಬ್ ಶಾಲೆಗಳು | ಶಾಲಾ ಮಕ್ಕಳು, ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು | 1000+ | ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಮಾಹಿತಿಯನ್ನು ಶಾಲೆಗಳು ಮತ್ತು ಸಾರ್ವಜನಿಕರಿಗೆ ಡಿಜಿಟಲ್ ಮಾಧ್ಯಮಗಳ ಮೂಲಕ ಪ್ರಸಾರ ಮಾಡಲು |

| | | | | | | |
|---|---|---|---|---|---|---|
| | | | | ಸಾರ್ವಜನಿಕರು | | ರಾ.ಹ.ಪ ಕಾರ್ಯಕ್ರಮದ ಸಾಕ್ಷ್ಯಚಿತ್ರವನ್ನು ತಯಾರಿಸಲಾಗಿದೆ. |
| 10 | "ಮಕ್ಕಳ ಚಂದದ ಪರಿಸರ" ಕುರಿತಾದ ಮಕ್ಕಳ ಪುಸ್ತಕ | 2020–21ರ ಹಣಕಾಸು ವರ್ಷದಲ್ಲಿ | -------- | ಶಾಲಾ ಮಕ್ಕಳು, ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ಸಾರ್ವಜನಿಕರು | – | ಇಕೋಕ್ಲಬ್ ಶಾಲೆಗಳಿಗೆ ವಿತರಣೆ ಮಾಡಿ, ಪರಿಸರದ ಬಗ್ಗೆ ಜಾಗೃತಿ ಮೂಡಿಸಲು "ಮಕ್ಕಳ ಚೆಂದದ ಪರಿಸರ" ಎಂಬ ಹೆಸರಿನ ಮಕ್ಕಳ ಪುಸ್ತಕವನ್ನು ಶ್ರೀ ನಾಗೇಶ್ ಹೆಗ್ಡೆ ಲೇಖಕ, ಪತ್ರಕರ್ತ, ಪರಿಸರವಾದಿ ಮುಖಾಂತರ ಬರೆಸಿ ಸಿದ್ಧಪಡಿಸಲಾಗಿದೆ. |

## 6. ತರಬೇತಿ ಕಾರ್ಯಕ್ರಮಗಳು

| ಕ್ರ.ಸಂ | ಚಟುವಟಿಕೆಯ ವಿವರ | ಅಭಿಯಾನದ ದಿನಾಂಕಗಳು | ಸ್ಥಳ | ಭಾಗಾಳು | ಭಾಗಾಳುಗಳ ಸಂಖ್ಯೆ | ಸಾರಾಂಶ |
|---|---|---|---|---|---|---|
| 01 | ರಾ.ಹ.ಪ ಜಿಲ್ಲಾ ನೋಡಲ್ ಅಧಿಕಾರಿಗಳ ಕಾರ್ಯಾಗಾರ | 27/11/2020 | ಆನ್‌ಲೈನ್ | ರಾ.ಹ.ಪ ಜಿಲ್ಲಾ ನೋಡಲ್ ಅಧಿಕಾರಿಗಳು | 34 | ರಾ.ಹ.ಪ ಕಾರ್ಯಕ್ರಮದ ಧ್ಯೇಯೋದ್ದೇಶಗಳ ಕುರಿತು ಮಾಹಿತಿ ನೀಡಲಾಯಿತು. ಶಾಲಾ ಮಟ್ಟದಲ್ಲಿ ಜಾರಿಗೆ ತರಬಹುದಾದ ನವೀನ ಚಟುವಟಿಕೆಗಳು ಹಾಗು ಯೋಜನೆಗಳ ಕುರಿತು ಚರ್ಚಿಸಲಾಯಿತು. 2019–20 ನೇ ಸಾಲಿನಲ್ಲಿ ರಾ.ಹ.ಪ ಯೋಜನೆಯನ್ನು ಉತ್ತಮವಾಗಿ ಅನುಷ್ಠಾನ ಮಾಡಲು ಚರ್ಚಿಸಲಾಯಿತು. |
| 02 | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರಿಗೆ 82 ತರಬೇತಿ ಕಾರ್ಯಕ್ರಮಗಳು. | 18/01/2021 ಇಂದ 05/032021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 11309 | 34 ಶೈಕ್ಷಣಿಕ ಜಿಲ್ಲೆಗಳ ಇಕೋಕ್ಲಬ್ ಉಸ್ತುವಾರಿ ಶಿಕ್ಷಕರಿಗೆ ಒಟ್ಟು 82 ತರಬೇತಿಗಳನ್ನು ನಡೆಸಲಾಯಿತು ರಾ.ಹ.ಪ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ವಿವರವಾದ ಪ್ರಸ್ತುತಿಯನ್ನು ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮ ಅಧಿಕಾರಿ ಶ್ರೀಮತಿ ಸತ್ಯಶ್ರೀ ಅವರು ನೀಡಿದರು ಮತ್ತು ರಾ.ಹ.ಪ ಸಿಬ್ಬಂದಿಯೊಂದಿಗೆ ಸಂವಾದಾತ್ಮಕ ಚರ್ಚೆ ಮಾಡಲಾಯಿತು. |

| | | | | | | |
|---|---|---|---|---|---|---|
| | ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 19.01.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 325 | ಸಂಪನ್ಮೂಲ ವ್ಯಕ್ತಿ, ಕುಮಾರಸ್ವಾಮಿ, ಮಾಜಿ ಸದಸ್ಯ ಕಾರ್ಯದರ್ಶಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯಗಳ ಮತ್ತು ತ್ಯಾಜ್ಯವನ್ನು ಬೇರ್ಪಡಿಸುವ ಮಹತ್ವದ ಕುರಿತು ಮಾತನಾಡಿದರು. |
| | ಮಳೆಬಿಲ್ಲಿನ ಏಳು ಬಣ್ಣಗಳ ಅದ್ಭುತ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 25.01.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 293 | ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ನಿವೃತ್ತ ಹೆಚ್ಚುವರಿ ನಿರ್ದೇಶಕರು ರಾಧೇಶ್ಯಾಂ ಬಾಲಾಜಿ ಅವರು "ಮಳೆಬಿಲ್ಲಿನ ಏಳು ಬಣ್ಣಗಳ ಅದ್ಭುತ" ಕುರಿತು ಮಾಹಿತಿ ಯನ್ನು ನೀಡಿದರು ಮತ್ತು ರಾಮನ್ ಪರಿಣಾಮವನ್ನು ವಿವರಿಸಿದರು. |
| | "ಚೀನಾ ಪಟ್ಟಣ ಟಾಕ್ಸಿನ್ಸ್ ವರ್ಸಸ್ ಚನ್ನಪಟ್ಟಣ ಆಟಿಕೆಗಳು" ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 27.01.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 445 | ಶ್ರೀಮತಿ ಲಕ್ಷ್ಮಿ ಬಾಲಾಜಿ, ನಿವೃತ್ತ ಶಿಕ್ಷಕರು ಇವರು "ಚೀನಾ ಪಟ್ಟಣ ಟಾಕ್ಸಿನ್ ವರ್ಸಸ್ ಚನ್ನಪಟ್ಟಣ ಆಟಿಕೆಗಳು" ಕುರಿತು ಮಾತನಾಡಿದರು. |
| | "ವಾಯು ಮತ್ತು ಶಬ್ದ ಮಾಲಿನ್ಯ" ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 01.02.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 301 | ಸಂಪನ್ಮೂಲ ವ್ಯಕ್ತಿ, ಮಹೇಶ್ ಕಶ್ಯಪ್, ಸಲಹೆಗಾರರು ಇವರು "ವಾಯು ಮತ್ತು ಶಬ್ದ ಮಾಲಿನ್ಯ" ಅದರ ಪರಿಣಾಮಗಳು ಮತ್ತು ನಿಯಂತ್ರಣದ ಕುರಿತು ಮಾತನಾಡಿದರು |

| | | | | | | |
|---|---|---|---|---|---|---|
| | "ಹಸಿರುಮನೆ ಅನಿಲ ಮತ್ತು ಹವಾಮಾನ ಬದಲಾವಣೆ" ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 29.01.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 410 | ಸಂಪನ್ಮೂಲ ವ್ಯಕ್ತಿ ಮಹೇಶ್ ಕಶ್ಯಪ್, ಸಲಹೆಗಾರರು, ಇವರು ಹಸಿರುಮನೆ ಅನಿಲ ಮತ್ತು ಹವಾಮಾನ ಬದಲಾವಣೆ" ಕುರಿತು ಮಾತನಾಡಿದರು. |
| | ವಾಯುಮಾಲಿನ್ಯ ಮತ್ತು ಆರೋಗ್ಯದ ದುಷ್ಪರಿಣಾಮಗಳ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 01.02.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 437 | ಶ್ರೀಮತಿ ಲಕ್ಷ್ಮಿ ಬಾಲಾಜಿ, ನಿವೃತ್ತ ಶಿಕ್ಷಕರು, ಇವರು ವಾಯುಮಾಲಿನ್ಯ ಮತ್ತು ಆರೋಗ್ಯದ ದುಷ್ಪರಿಣಾಮಗಳ ಕುರಿತು ಮಾತನಾಡಿದರು. |
| | "ನೀರು, ನಮ್ಮ ಜೀವಸೆಲೆ" ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 02.02.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 315 | ಶ್ರೀಮತಿ ಲಕ್ಷ್ಮಿ ಬಾಲಾಜಿ, ನಿವೃತ್ತ ಶಿಕ್ಷಕರು ಇವರು "ನೀರು, ನಮ್ಮ ಜೀವಸೆಲೆ" ಕುರಿತು ಮಾತನಾಡಿದರು. |
| | "ನೀರು, ನಮ್ಮ ಜೀವಸೆಲೆ" ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ | 03.02.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 390 | ಶ್ರೀಮತಿ ಲಕ್ಷ್ಮಿ ಬಾಲಾಜಿ, ನಿವೃತ್ತ ಶಿಕ್ಷಕರು, ಇವರು "ನೀರು, ನಮ್ಮ ಜೀವಸೆಲೆ" ಕುರಿತು ಮಾತನಾಡಿದರು. |

| | | | | | | |
|---|---|---|---|---|---|---|
| | "ನಮ್ಮ ಪರಿಸರ ಹೇಗೆ ಮತ್ತು ಏಕೆ ನಾವು ಅದನ್ನು ಕಾಳಜಿ ವಹಿಸಬೇಕು" ಕುರಿತಾದ ಆನ್‌ಲೈನ್ ತರಬೇತಿ | 04.02.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 454 | ಶ್ರೀಮತಿ ಲಕ್ಷ್ಮಿ ಬಾಲಾಜಿ, ನಿವೃತ್ತ ಶಿಕ್ಷಕರು, ಇವರು."ನಮ್ಮ ಪರಿಸರ ಹೇಗೆ ಮತ್ತು ಏಕೆ ನಾವು ಕಾಳಜಿ ವಹಿಸಬೇಕು" ಕುರಿತು ಮಾತನಾಡಿದರು. |
| 03 | ಟೈಡ್ ಟರ್ನರ್‌ನ ಪ್ಲಾಸ್ಟಿಕ್ ಚಾಲೆಂಜ್ ಕುರಿತು ಪರಿಸರ ಶಿಕ್ಷಣ ಕೇಂದ್ರ (ಸಿಇಇ) ದಿಂದ ಆನ್‌ಲೈನ್ ತರಬೇತಿ ಕಾರ್ಯಕ್ರಮ | 22.02.2021, 25.02.2021, 03.03.2021& 05.03.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 1178 | ಟೈಡ್ ಟರ್ನರ್‌ನ ಪ್ಲಾಸ್ಟಿಕ್ ಚಾಲೆಂಜ್, ಪ್ಲಾಸ್ಟಿಕ್‌ನ ಹಾನಿಕಾರಕ ಪರಿಣಾಮಗಳು ಮತ್ತು ಪ್ಲಾಸ್ಟಿಕ್‌ಗೆ ಪರ್ಯಾಯವ್ಯವಸ್ತೆ ಕುರಿತು ಪರಿಸರ ಶಿಕ್ಷಣ ಕೇಂದ್ರ (ಸಿಇಇ) ಯ ಸಂಪನ್ಮೂಲ ವ್ಯಕ್ತಿ ಆನ್‌ಲೈನ್ ಮುಖಾಂತರ ಮಾಹಿತಿ ನೀಡಿದರು. |
| 04 | ಪನಿನೀಸಂಸಂನ ಸ್ವಯಂಸೇವಕರಿಗೆ ತರಬೇತಿ ಕಾರ್ಯಕ್ರಮ | 06.03.2021 | ಆನ್‌ಲೈನ್ | ಪನಿನೀಸಂಸಂನ ಸ್ವಯಂಸೇವಕರು | 10 | ಪನಿನೀಸಂಸಂನ ವಿವಿಧ ಚಟುವಟಿಕೆಗಳಲ್ಲಿ ಪನಿನೀಸಂಸಂನ ಸ್ವಯಂಸೇವಕರ ಪಾತ್ರದ ಕುರಿತು ಚರ್ಚಿಸಲಾಯಿತು. |
| 05 | ಪೆಟ್ರೋಲಿಯಂ ಸಂರಕ್ಷಣಾ ಸಂಶೋಧನಾ ಸಂಸ್ಥೆಯಿಂದ ತರಬೇತಿ ಕಾರ್ಯಕ್ರಮ | 31.03.2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 200+ | ಪರಿಸರ ಸಂರಕ್ಷಣೆ ಶಿಕ್ಷಕರಿಗೆ ಆಯಾ ಶಾಲೆಗಳಲ್ಲಿ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಇಂಧನ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣಾ ಶಿಕ್ಷಣ ಕಾರ್ಯಕ್ರಮದ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು |

**7. ಸಭೆಗಳು**

| ಕ್ರ.ಸಂ | ದಿನಾಂಕ | ಚಟುವಟಿಕೆಗಳ ವಿವರಗಳು | ಭಾಗವಹಿಸುವವರು | ಸ್ಥಳ | ವಿವರ |
|---|---|---|---|---|---|
| 01 | 14/07/2020 | ರಾಜ್ಯ ಸಂಚಾಲನ ಸಮಿತಿ ಸಭೆ | ರಾಜ್ಯ ಸಂಚಾಲನ ಸಮಿತಿ ಸಭೆ ಸದಸ್ಯರು | ವಿಡಿಯೋ ಕಾನ್ಫರೆನ್ಸ್ | ರಾಜ್ಯ ಸಂಚಾಲನಾ ಸಮಿತಿ ಸಭೆಯಲ್ಲಿ ಕಳೆದ ಸಭೆಯ ನಡಾವಳಿಗಳು ಮತ್ತು ಕೈಗೊಂಡ ಕಾರ್ಯಚಟುವಟಿಕೆಗಳ ವರದಿ ಪಡೆದು ಧೃಡೀಕರಿಸಲಾಯಿತು. ಸಭೆಯಲ್ಲಿ ಕಾರ್ಯಕ್ರಮದ ಪ್ರಗತಿ ವಿಮರ್ಶಿಸಲಾಯಿತು. 2020–21 ನೇ ಸಾಲಿನ ರಾ.ಹ.ಪ ಕಾರ್ಯಯೋಜನೆ ಮತ್ತು ಬಜೆಟ್ ಅನ್ನು ಅನುಮೋದಿಸಲಾಯಿತು. |
| 02 | ಹಣಕಾಸು ವರ್ಷ 2020–21 | 16 ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ (ಡಿಐಎಂಸಿ) | ಡಿಐಎಂಸಿ ಸದಸ್ಯರು | ಜಿಲ್ಲಾಧಿಕಾರಿಗಳ ಕಛೇರಿ ಹಾವೇರಿ, ಮಧುಗಿರಿ, ಚಿಕ್ಕ ಮಗಳೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಉಡುಪಿ, ಕೊಪ್ಪಳ, ಶಿವಮೊಗ್ಗ, ದಾವಣಗೆರೆ, ಚಿಕ್ಕೋಡಿ, ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಧಾರವಾಡ ಜಿಲ್ಲೆಗಳು | ರಾ.ಹ.ಪ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಯಿತು |

## 8. ಇತರೆ ಉಪಕ್ರಮಗಳು

ಪನಿನೀಸಂಸಂ ಸ್ವಯಂ ಸೇವಕ ಕಾರ್ಯಕ್ರಮದಲ್ಲಿ, ಪರಿಸರಕ್ಕಾಗಿ ಕೆಲಸ ಮಾಡುವ ಉತ್ಸಾಹವುಳ್ಳ ಜನರು, ಕಾಲೇಜು/ವಿಶ್ವ ವಿದ್ಯಾಲಯಗಳ ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು ಹಾಗು ವಿವಿಧ ತಾಲ್ಲೂಕು, ಜಿಲ್ಲೆಗಳಲ್ಲಿ ತಮ್ಮ ಸೇವೆಯನ್ನು ನೀಡಬಹುದು. ಇದು ಪ್ಲಾಸ್ಟಿಕ್ ನಿಷೇಧ ಅನುಷ್ಠಾನ, ಬಯಲು ಶೌಚಮುಕ್ತ ಹಳ್ಳಿಗಳು; ಸಮೀಕ್ಷೆ ಹಾಗು ತಮ್ಮ ಪರಿಸರದ ಮೇಲೆ ಹವಾಮಾನ ಬದಲಾವಣೆ ಬೀರುತ್ತಿರುವ ಪರಿಣಾಮಗಳು, ಇತರೆ ಪರಿಸರ ಕುರಿತ ಸಮಸ್ಯೆಗಳ ಕುರಿತಂತೆ ಒಂದು ಧೃಡವಾದ ಸಂಪರ್ಕ ವ್ಯವಸ್ಥೆ ಕಲ್ಪಿಸುತ್ತದೆ ಮತ್ತು ಪರಿಸರ ಸಂರಕ್ಷಣೆಯ ಗುರಿಯನ್ನು ಸಾಧಿಸಲು ಸಹಕಾರಿಯಾಗುತ್ತದೆ

## 9. ಸಾಧನೆಗಳು

- ಕರ್ನಾಟಕ ರಾಜ್ಯದ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮಕ್ಕಾಗಿ ವೆಬ್ ಆದಾರಿತ ಮತ್ತು ಮೊಬೈಲ್ ಮುಖಾಂತರ ಉಪಯೋಗಿಸುವ ಆಪ್ಲಿಕೇಶನ್ ತಂತ್ರಾಂಶವನ್ನು ಆಭಿವೃದ್ಧಿ ಪಡಿಸಲಾಗಿದೆ. ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ಕಾಗದದ ಬಳಕೆಯನ್ನು ತೀವ್ರವಾಗಿ ಕಡಿಮೆ ಮಾಡಲು ಪನಿನೀಸಂಸಂ ಶಾಲೆಗಳು ಮತ್ತು ರಾಷ್ಟ್ರೀಯ ಹಸಿರು ಪಡೆಯ ನೋಡಲ್ ಅಧಿಕಾರಿಗಳಿಗೆ ಅಪ್ಲಿಕೇಶನ್ ತಂತ್ರಾಂಶ ಸಹಾಯ ಮಾಡುತ್ತದೆ. ಶಾಲೆಗಳು ಮತ್ತು ಜಿಲ್ಲೆಗಳು ಮತ್ತು ಪನಿನೀಸಂಸಂ ಯನ್ನು ನೇರವಾಗಿ ಸಂಪರ್ಕಿಸಲು ಸಹಕಾರಿಯಾಗುತ್ತದೆ. ಅಪ್ಲಿಕೇಶನ್ ತಂತ್ರಾಂಶವನ್ನು ಕರ್ನಾಟಕ ಸರ್ಕಾರದ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ ಅಭಿವೃದ್ಧಿಪಡಿಸಿದೆ.

- ಪನಿನೀಸಂಸಂ ಗೆ ಬೆಸ್ಟ್ ಸ್ಟೋರಿ ಆಫ್ ಚೇಂಜ್ ಅವಾರ್ಡ್: ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್–ಇಂಡಿಯಾ (ಡಬ್ಲ್ಯುಡಬ್ಲ್ಯುಎಫ್) ಕರ್ನಾಟಕದಲ್ಲಿ ಡಬ್ಲ್ಯುಡಬ್ಲ್ಯುಎಫ್‌ನ ಒನ್ ಅರ್ಥ್ ಒನ್ ಹೋಮ್ ಕಾರ್ಯಕ್ರಮಕ್ಕೆ ಕೊಡುಗೆ ನೀಡಿದ್ದಕ್ಕಾಗಿ ಪನಿನೀಸಂಸಂಗೆ ಬದಲಾವಣೆಯ ಅತ್ಯುತ್ತಮ ಕಥೆ ಪ್ರಶಸ್ತಿ ನೀಡಿದೆ.

## 10. ಪರಿಸರಕೂಟ ಶಾಲೆಗಳಿಗೆ ರಾಷ್ಟ್ರೀಯ ಹಸಿರು ಪಡೆ ತಂಡದ ಭೇಟಿ

| ಕ್ರ.ಸಂ. | ಜಿಲ್ಲೆಯ ಹೆಸರು | ಶಾಲಾ ಭೇಟಿ ಸಂಖ್ಯೆ | ಕ್ರ.ಸಂ. | ಜಿಲ್ಲೆಯ ಹೆಸರು | ಶಾಲಾ ಭೇಟಿ ಸಂಖ್ಯೆ |
|---|---|---|---|---|---|
| 1 | ಬಾಗಲಕೋಟೆ | 0 | 18 | ಗುಲ್ಬರ್ಗ | 90 |
| 2 | ಬೆಂಗಳೂರು ಉತ್ತರ | 80 | 19 | ಹಾಸನ | 84 |
| 3 | ಬೆಂಗಳೂರು ಗ್ರಾಮಾಂತರ | 20 | 20 | ಹಾವೇರಿ | 0 |
| 4 | ಬೆಂಗಳೂರು ದಕ್ಷಿಣ | 20 | 21 | ಕೊಡಗು | 50 |
| 5 | ಬೆಳಗಾವಿ | 101 | 22 | ಕೋಲಾರ | 75 |
| 6 | ಬಳ್ಳಾರಿ | 90 | 23 | ಕೊಪ್ಪಳ | 16 |
| 7 | ಬೀದರ್ | 124 | 24 | ಮಧುಗಿರಿ | 50 |
| 8 | ಬಿಜಾಪುರ | 90 | 25 | ಮಂಡ್ಯ | 75 |
| 9 | ಚಿಕ್ಕಬಳ್ಳಾಪುರ | 8 | 26 | ಮೈಸೂರು | 0 |
| 10 | ಚಾಮರಾಜನಗರ | 60 | 27 | ರಾಯಚೂರು | 0 |
| 11 | ಚಿಕ್ಕೋಡಿ | 45 | 28 | ರಾಮನಗರ | 40 |
| 12 | ಚಿಕ್ಕಮಗಳೂರು | 20 | 29 | ಶಿವಮೊಗ್ಗ | 63 |
| 13 | ಚಿತ್ರದುರ್ಗ | 0 | 30 | ಶಿರಸಿ | 116 |
| 14 | ದಕ್ಷಿಣ ಕನ್ನಡ | 0 | 31 | ತುಮಕೂರು | 65 |
| 15 | ದಾವಣಗೆರೆ | 0 | 32 | ಉಡುಪಿ | 0 |
| 16 | ಧಾರವಾಡ | 42 | 33 | ಉತ್ತರಕನ್ನಡ | 101 |
| 17 | ಗದಗ | 83 | 34 | ಯಾದಗಿರಿ | 60 |
| | ಒಟ್ಟು | | | | **1668** |

# ಫೋಟೋಗ್ಯಾಲರಿ

## ವಿಶ್ವ ಭೂ ದಿನ 2020




ಚಿತ್ರಕಲೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಿಂದ ಚಿತ್ರಕಲೆ

## ವಿಶ್ವ ಪರಿಸರ ದಿನಾಚರಣೆ 2020



ಗಿಡಗಳನ್ನು ನೆಡುವ ಕಾರ್ಯಕ್ರಮ

## ವಿಶ್ವ ಓಝೋನ್ ದಿನಾಚರಣೆ 2020



ವಿಶ್ವ ಓಝೋನ್ ದಿನಾಚರಣೆ–ವೆಬಿನಾರ್

## ವಿಶ್ವ ಜೌಗುಭೂಮಿ ದಿನಾಚರಣೆ 2020



ರಾಷ್ಟ್ರೀಯ ಹಸಿರು ಪಡೆ ಸಿಬ್ಬಂದಿಯಿಂದ ಜೌಗುಭೂಮಿ ದಿನದ ಪ್ರಾಮುಖ್ಯತೆ ಬಗ್ಗೆ ಭಾಷಣ

## ವಿಶ್ವ ಜಲದಿನ ಆಚರಣೆ



ವಿಶ್ವ ಜಲ ದಿನಾಚರಣೆಯಲ್ಲಿ ಭಾಗವಹಿಸಿದವರು

## ಸಂವಿಧಾನ ದಿನ



ಎಂಪ್ರಿ ಸಿಬ್ಬಂದಿಯಿಂದ ಸಂವಿಧಾನ ಮುನ್ನುಡಿ ಓದುವಿಕೆ

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ




ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಶನ್ ಪ್ರೌಢ ಶಾಲೆಯಲ್ಲಿ ಕಾರ್ಯಕ್ರಮ ಅಧಿಕಾರಿ, ರಾಷ್ಟ್ರೀಯ ಹಸಿರು ಪಡೆ ಇವರಿಂದ ಭಾಷಣ.

# ಸ್ವಚ್ಛತಾ ಕ್ರಿಯಾ ಯೋಜನೆ ಅಡಿಯಲ್ಲಿ ಚಟುವಟಿಕೆಗಳು

## ಕಸದಿಂದ ಕಸದ ಬುಟ್ಟಿಗೆ ಅಭಿಯಾನ





ಸಾರ್ವಜನಿಕರಿಗೆ ಕರಪತ್ರಗಳ ವಿತರಣೆ

## ಮುಖಗವಸಗಳು ಮತ್ತು ಸ್ಯಾನಿಟೈಸರ್‌ಗಳ ವಿತರಣೆ




ಬಿಎಂಟಿಸಿಯ ಸಿಬ್ಬಂದಿಗೆ ಮುಖಗವಸಗಳು ಮತ್ತು ಸ್ಯಾನಿಟೈಸರ್‌ಗಳ ವಿತರಣೆ

## ಜಾಲತಾಣದಲ್ಲಿ ಸ್ವಚ್ಛತಾ ಸಂದೇಶಗಳ ಪ್ರದರ್ಶನ




ರಾಹಪ ಜಾಲತಾಣದಲ್ಲಿ ಸ್ವಚತಾ ಸಂದೇಶಗಳ ಪ್ರದರ್ಶನ

## ಪತಂಗಗಳ ಜೀವವೈವಿಧ್ಯತೆಯ ಕುರಿತು ಆನ್ಲೈನ್ ಛಾಯಚಿತ್ರ ಸ್ಪರ್ಧೆ




## ಸ್ಯಾನಿಟೈಸರ್‌ಗಳ ವಿತರಣೆ




ಹಿಂದುಳಿದವರಿಗೆ ಸ್ಯಾನಿಟೈಸರ್‌ಗಳ ವಿತರಣೆ

## ಕಚೇರಿಯಲ್ಲಿ ಸ್ವಚ್ಚತಾ ಸಂದೇಶಗಳ ಪ್ರದರ್ಶನ



ಕಚೇರಿಯ ಮುಂಭಾಗದಲ್ಲಿ ಪ್ಲಾಸ್ಟಿಕ್ ನಿಷೇಧ ಸಂದೇಶಗಳ ಪ್ರದರ್ಶನ

## ಶಾಲಾ ಮಕ್ಕಳಿಗೆ ಆನ್ಲೈನ್ ಸ್ಪರ್ಧೆ







ಬಹುಮಾನ ವಿಜೇತರಿಂದ ಕೋವಿಡ್ – 19 ಕುರಿತು ಚಿತ್ರ

## ಗಿಡ ನೆಡುವ ಕಾರ್ಯಕ್ರಮ





ರಾಷ್ಟ್ರೀಯ ಹಸಿರು ಪಡೆ ಸಿಬ್ಬಂದಿಯಿಂದ ಗಿಡ ಗಿಡ ನೆಡುವ ಕಾರ್ಯಕ್ರಮ

## ಹಸಿರು ದೀಪಾವಳಿ–ಸ್ವಸ್ಥ ದೀಪಾವಳಿ




ಎಂಎಲ್ಎ ಕಾಲೇಜು ಮತ್ತು ರಾಷ್ಟ್ರೀಯ ಹಸಿರು ಪಡೆ ತಂಡದ ಸಿಬ್ಬಂದಿಯಿಂದ ಪ್ರತಿಜ್ಞೆ

## ಇ–ತ್ಯಾಜ್ಯ ನಿರ್ವಹಣೆ ಕುರಿತು ವೆಬಿನಾರ್





ಇ–ತ್ಯಾಜ್ಯ ನಿರ್ವಹಣೆ ಕುರಿತು ವೆಬಿನಾರ್

## ಬಯಲು ಶೌಚ ಮುಕ್ತ ಜಾಗೃತಿ ಕಾರ್ಯಕ್ರಮ



ದೇವನಹಳ್ಳಿ ಗ್ರಾಮಾಂತರ ಪ್ರದೇಶದಲ್ಲಿ ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸುತ್ತಿರುವುದು.

**ಪ್ಲಾಸ್ಟಿಕ್ ನಿಷೇಧ ವಿಷಯದ ಕುರಿತು ವೆಬಿನಾರ್**




ಪ್ಲಾಸ್ಟಿಕ್ ನಿಷೇಧ ವೆಬಿನಾರ್

**ಪ್ಲಾಸ್ಟಿಕ್ ನಿಷೇಧ ಕಾರ್ಯಕ್ರಮ**





ಮಲ್ಲೇಶ್ವರಂನ ವಿವಿಧ ಸ್ಥಳಗಳಲ್ಲಿ ಪ್ಲಾಸ್ಟಿಕ್ ನಿಷೇಧ ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸುತ್ತಿರುವುದು.

**ಕಸ ವಿರೋಧಿ ಅಭಿಯಾನ ಹಾಗೂ ಕೋವಿಡ್-19 ಜಾಗೃತಿ**




ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿರುವುದು.

**ರಾಷ್ಟ್ರೀಯ ಹಸಿರು ಪಡೆ ಚಟುವಟಿಕೆಗಳ ಪ್ರಚಾರ**




ಸಾಮಾಜಿಕ ಜಾಲತಾಣದ ಮೂಲಕ ರಾಷ್ಟ್ರೀಯ ಹಸಿರು ಪಡೆ ಚಟುವಟಿಕೆಗಳ ಪ್ರಚಾರ.

## 5 ಕಡಲ ತೀರಗಳ ದತ್ತು ಸ್ವೀಕಾರ – ಸ್ವಚ್ಛತೆ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳು



ಗೋಕರ್ಣ ಕಡಲ ತೀರದಲ್ಲಿ ಸ್ವಯಂಸೇವಕರಿಂದ ಸ್ವಚ್ಛತಾ ಕಾರ್ಯ



ಉದಯವಾಣಿ

ದೇಶದಲ್ಲೇ ಮೊದಲ ಬಾರಿಗೆ ಸರಕಾರದಿಂದ ಬೀಚ್ ದತ್ತು

| ಇಡ್ಯಾ, ಕೋಡಿ ಬೀಚ್‌ಗೆ ಶೀಘ್ರ ಬ್ಲೂಫ್ಲ್ಯಾಗ್ ಮಾನ್ಯತೆ | ಪ್ರತೀ ಬೀಚ್‌ಗೆ ಸುಮಾರು 8 ಕೋ.ರೂ. | ನ. 10ರಂದು ಚಾಲನೆ

ಲಕ್ಷ್ಮೀ ಮಚ್ಚಿನ

ಕಡಲ ತೀರದ ಸ್ವಚ್ಛತಾ ಚಟುವಟಿಕೆಗಳ ಕುರಿತು ಉದಯವಾಣಿ ಕನ್ನಡ ದಿನಪತ್ರಿಕೆಯಲ್ಲಿ ವರದಿ ಭಿತರವಾಗಿರುವುದು.




ಸ್ವಚ್ಛತಾ ಕಾರ್ಯಕ್ಕೆ ಮೊದಲು ಕಡಲತೀರದಲ್ಲಿರುವ ತ್ಯಾಜ್ಯ



ಸ್ವಚ್ಛತಾ ಕಾರ್ಯದ ನಂತರ ತ್ಯಾಜ್ಯದ ಸಂಗ್ರಹ

## ಒಂದು ಭೂಮಿ ಒಂದು ಮನೆ ಕಾರ್ಯಕ್ರಮ




ಎಂಪ್ರಿಗೆ ಲಭಿಸಿರುವ ಪ್ರಶಸ್ತಿ




ಎಂಪ್ರಿಗೆ ಅತ್ಯುತ್ತಮ ಕಥಾಚಿತ್ರಣ ಬದಲಾವಣೆ ಪ್ರಶಸ್ತಿಯನ್ನು ನೀಡುತ್ತಿರುವ ಶ್ರೀಮತಿ. ಸೌಂದರ್ಯವಲ್ಲಿ, ಮುಖ್ಯಸ್ಥರು, ಕರ್ನಾಟಕ ರಾಜ್ಯ, ಡಬ್ಲ್ಯುಡಬ್ಲ್ಯುಎಫ್ ಇಂಡಿಯಾ.,

**ಪೋಷಣ್ ಅಭಿಯಾನ**




ಇಕೊ ಕ್ಲಬ್ ಶಾಲಾ ಮಕ್ಕಳಿಂದ ಪೋಷಣ್ ಅಭಿಯಾನ ಕಾರ್ಯಕ್ರಮ

**ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ**



ದಾವಣಗೆರೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ









ಮಕ್ಕಳ ಪುಸ್ತಕ “ಮಕ್ಕಳ ಚೆಂದದ ಪರಿಸರ”

# ತರಬೇತಿ ಕಾರ್ಯಕ್ರಮಗಳು




ಶ್ರೀಮತಿ. ಸತ್ಯಶ್ರೀ ಕಾರ್ಯಕ್ರಮ ಅಧಿಕಾರಿ, ಅವರಿಂದ ಆನ್‌ಲೈನ್ ತರಬೇತಿ




ಪರಿಸರ ಶಿಕ್ಷಣ ಕೇಂದ್ರ ಸಿಬ್ಬಂದಿಯಿಂದ “ಟೈಡ್ ಟರ್ನರ್ ಪ್ಲಾಸ್ಟಿಕ್ ಚಾಲೆಂಜ್” ತರಬೇತಿ ಕಾರ್ಯಕ್ರಮ

# ರಾಷ್ಟ್ರೀಯ ಹಸಿರು ಪಡೆ ಸಿಬ್ಬಂದಿಯಿಂದ ಶಾಲಾ ಭೇಟಿ




ಉತ್ತರ ಕನ್ನಡ ಜಿಲ್ಲೆಯ ಶಾಲೆಗೆ ಕಾರ್ಯಕ್ರಮ ಅಧಿಕಾರಿಯಿಂದ ಭೇಟಿ



ಉಡುಪಿ ಜಿಲ್ಲೆಯ ಶಾಲೆಗೆ ಕಾರ್ಯಕ್ರಮ ಸಂಯೋಜಕರಿಂದ ಭೇಟಿ